In exercise of the powers conferred by Article 8 (b) of Memorandum and Articles of Association of Karnataka Handloom Development Corporation Limited, the Government of Karnataka hereby appoint Ms. Meenu S. Kumar, Chief Enforcement Officer, Office of the Development Commissioner for Handlooms, New Delhi, as Director in place of Sri Inder Dhamja, IAS., on the Board of Karnataka Handloom Development Corporation Limited with immediate effect and until further orders.

By Order and in the name of the Governor of Karnataka,

M.S. GANAPATHY

Deputy Secretary to Government,

Commerce & Industries Department

P.R. 835

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಐ 226 ಎಸ್‌ಪಿಕ್ಯೂ 2009, ಬೆಂಗಳೂರು, ದಿನಾಂಕ: 1ನೇ ಜುಲೈ 2009.

ವಿಜಯನಗರ ಸ್ಟೀಲ್ ಪ್ಲಾಂಟ್ (ಲಿ) ಕಂಪನಿಯ ಸಂಘ ನಿಯಮಾವಳಿಗಳ ಆರ್ಟಿಕಲ್ 37ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ಹೊಂದಿರುವ ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ, ಸರ್ಕಾರದ ಉಪ ಕಾರ್ಯದರ್ಶಿ (ಗಣಿ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಇವರು ವರ್ಗಾವಣೆಯಾಗಿರುವ ಕಾರಣ, ಇವರ ಬದಲಾಗಿ ಶ್ರೀ ಜಿ.ಎ. ಅಡಗಟ್ಟಿ, ಸರ್ಕಾರದ ಜಂಟಿ ಕಾರ್ಯದರ್ಶಿ (ಗಣಿ) ರವರನ್ನು ವಿಜಯನಗರ ಸ್ಟೀಲ್ (ಲಿ)ನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಅಧಿಕ ಪ್ರಭಾರದ ಮೇರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಕೆ.ಎಂ. ವೀರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 836

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 46 ಎಲ್‌ಇಟಿ 2009, ಬೆಂಗಳೂರು, ದಿನಾಂಕ: 26ನೇ ಜೂನ್ 2009.

ಕಾರ್ಮಿಕ ಇಲಾಖೆಯ ಈ ಕೆಳಕಂಡ ಕಾರ್ಮಿಕ ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ತೋರಿಸಲಾಗಿರುವ ಸ್ಥಳಕ್ಕೆ ವರ್ಗಾವಣೆ ಮಾಡಿ ನೇಮಕ ಮಾಡಲಾಗಿದೆ.

ಕ್ರ.ಸಂ	ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ	ವರ್ಗಾವಣೆ ಮಾಡಲಾಗಿರುವ ಸ್ಥಳ
1	ಶ್ರೀ ದೇವರಾಜ್ ಎಂ.ಎನ್. ಕಾರ್ಮಿಕ ಅಧಿಕಾರಿ, ಕಾರವಾರ	ಕಾರ್ಮಿಕ ಅಧಿಕಾರಿ, ಉಪವಿಭಾಗ-2, ಬೆಂಗಳೂರು, ಶ್ರೀ ಮೊಹಮ್ಮದ್ ಯೂಸುಫ್ ಇವರ ವರ್ಗಾವಣೆಯಿಂದ ತೆರವಾಗಲಿರುವ ಸ್ಥಳ
2	ಶ್ರೀ ಮೊಹಮ್ಮದ್ ಯೂಸುಫ್ ಕಾರ್ಮಿಕ ಅಧಿಕಾರಿ, ಉಪವಿಭಾಗ-2, ಬೆಂಗಳೂರು	ಕಾರ್ಮಿಕ ಅಧಿಕಾರಿ, ಉಪ ವಿಭಾಗ-2, ಮಂಡ್ಯ ಖಾಲಿ ಹುದ್ದೆ
3	ಶ್ರೀ ಕೆ.ಎಲ್. ರವಿಕುಮಾರ್, ಕಾರ್ಮಿಕ ಅಧಿಕಾರಿ, ಮಡಿಕೇರಿ	ಕಾರ್ಮಿಕ ಅಧಿಕಾರಿ, ತುಮಕೂರು ಶ್ರೀಮತಿ ಎಂ. ಶೀಲಾ ಇವರ ವರ್ಗಾವಣೆಯಿಂದ ತೆರವಾಗಲಿರುವ ಸ್ಥಳ

4	ಶ್ರೀಮತಿ ಎಂ.ಶೀಲಾ, ಕಾರ್ಮಿಕ ಅಧಿಕಾರಿ, ತುಮಕೂರು	ಕಾರ್ಮಿಕ ಅಧಿಕಾರಿ, ಮಡಿಕೇರಿ ಶ್ರೀ ಕೆ.ಎಲ್. ರವಿಕುಮಾರ್, ಇವರ ವರ್ಗಾವಣೆಯಿಂದ ತೆರವಾಗಲಿರುವ ಸ್ಥಳ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 837

ಯು.ಎನ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ

ಒಳಾಡಳಿತ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಒಇ 296 ಪೊಸಇ 2008, ಬೆಂಗಳೂರು, ದಿನಾಂಕ: 1ನೇ ಜುಲೈ 2009.

ರಾಜ್ಯ ಪೊಲೀಸ್ ಇಲಾಖೆಯ ಈ ಕೆಳಕಂಡ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಸಿವಿಲ್) ವೃಂದದ ಅಧಿಕಾರಿಗಳನ್ನು ಅವರ ಹೆಸರುಗಳ ಮುಂದೆ ಸೂಚಿಸಿರುವ ಹುದ್ದೆಗಳಿಗೆ, ಸಾರ್ವಜನಿಕ ಹಿತದೃಷ್ಟಿಯಿಂದ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಶ್ರೀಯುತರು	ವರ್ಗಾವಣೆ ನಂತರ ಸ್ಥಳನಿಯುಕ್ತಿಗೊಳಿಸಿದ ಹುದ್ದೆ
1	ವಿಶ್ವನಾಥ ಪಂಡಿತ ಡಿವೈ.ಎಸ್.ಪಿ ಐಜಿಪಿ ರವರ ಕಛೇರಿ ಪಶ್ಚಿಮ ವಲಯ, ಮಂಗಳೂರು	ಡಿವೈ.ಎಸ್.ಪಿ. ಕುಂದಾಪುರ ಉಪ ವಿಭಾಗ – ಶ್ರೀ ಸಿ.ಕೆ. ಶಶಿಧರ ಇವರ ಸ್ಥಾನದಲ್ಲಿ
2	ಸಿ.ಕೆ. ಶಶಿಧರ ಡಿವೈ.ಎಸ್.ಪಿ. ಕುಂದಾಪುರ ಉಪ ವಿಭಾಗ	ಡಿವೈ.ಎಸ್.ಪಿ ಐಜಿಪಿ ರವರ ಕಛೇರಿ ಪಶ್ಚಿಮ ವಲಯ, ಮಂಗಳೂರು– ಶ್ರೀ ವಿಶ್ವನಾಥ ಪಂಡಿತ ಇವರ ಸ್ಥಾನದಲ್ಲಿ
3	ಎಸ್. ಗಿರೀಶ್ ಡಿವೈ.ಎಸ್.ಪಿ. ಸಿ.ಓ.ಡಿ. ಬೆಂಗಳೂರು	ಡಿವೈ.ಎಸ್.ಪಿ. ಪಣಂಬೂರು ಉಪ ವಿಭಾಗ– ಶ್ರೀ ಸುರೇಶ್ ಆರ್. ನಾಯ್ಡು ಇವರ ಸ್ಥಾನದಲ್ಲಿ

ಈ ಅಧಿಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಯವರ ಸಂಖ್ಯೆ:ಪಿಎಸ್‌ಸಿಎಂ/ಎಫ್–2792/2009 ದಿನಾಂಕ:10.6.2009 ರನ್ವಯ ಅನುಮೋದಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 839

ಟಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)(ಪ್ರ)

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ವಿಸಸ /ಕವಿಸಸ/ಆ–1/88/ನಿಯೋ/2009, ಬೆಂಗಳೂರು, ದಿನಾಂಕ: 4ನೇ ಜುಲೈ 2009.

ಡಾ: ಎನ್. ಶ್ರೀನಿವಾಸ್, ಉಪನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರನ್ನು ಅವರದೇ ಆದ ವೇತನ ಹಾಗೂ ವೇತನ ಶ್ರೇಣಿಯ ಜೊತೆಗೆ ಲಭ್ಯವಿರುವ ವಿಶೇಷ ವೇತನದೊಂದಿಗೆ ದಿನಾಂಕ:25.6.2009 ರಿಂದ ಜಾರಿಗೆ ಬರುವಂತೆ ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಸಿಬ್ಬಂದಿ ಶಾಖೆಯಲ್ಲಿ ಇವರ ಸೇವೆಯು ಅವಶ್ಯವಿರುವವರೆಗೆ ಅಥವಾ ಹಾಲಿ ವಿಧಾನ ಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರ ಪದಾವಧಿಯವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯಾಗಿ ನಿಯೋಜನೆಯ ಮೇರೆಗೆ ನೇಮಿಸಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,

ಪಿ.ಆರ್. 841

ಎಂ.ಕೆ. ವಿಶಾಲಾಕ್ಷಿ

ಅಧೀನ ಕಾರ್ಯದರ್ಶಿ

ಕರ್ನಾಟಕ ವಿಧಾನಸಭೆ ಸಚಿವಾಲಯ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 142 ಎಲ್‌ಎಸಿ 2009, ಬೆಂಗಳೂರು, ದಿನಾಂಕ: 1ನೇ ಜುಲೈ 2009.

ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ:ಜಿಒಬಿ (I) 1/2009, ದಿನಾಂಕ:30-6-2009ರ ಭಾಗ-ಬಿ ನಲ್ಲಿ ಜಿಲ್ಲಾ ನ್ಯಾಯಾಧೀಶರ ವೃಂದಕ್ಕೆ ಪದನ್ನೋತಿ ನೀಡಿ ಆದೇಶಿಸಿರುವಂತೆ ಈ ಕೆಳಕಂಡ ನ್ಯಾಯಿಕ ಅಧಿಕಾರಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಲಾಗಿರುವ ಖಾಲಿ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿ ಮಾಡಲಾಗಿದೆ.

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಪದನಾಮ	ಪದನ್ನೋತಿ ನಂತರ ಸ್ಥಳ ನಿಯುಕ್ತಿಗೊಳಿಸಲಾದ ಹುದ್ದೆ
1	ಶ್ರೀ ಎಸ್. ರೇಣುಕ ಪ್ರಸಾದ್, ಪ್ರಿಸೈಡಿಂಗ್ ಆಫೀಸರ್, ತ್ವರಿತಗತಿ ನ್ಯಾಯಾಲಯ-2 ಮೈಸೂರು	ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಮೈಸೂರು –ಖಾಲಿ ಹುದ್ದೆಯಲ್ಲಿ
2	ಶ್ರೀಮತಿ ಹೆಚ್.ಎಸ್. ಕಮಲ, 34 ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು	2ನೇ ಹೆಚ್ಚುವರಿ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು –ಖಾಲಿ ಹುದ್ದೆಯಲ್ಲಿ
3	ಶ್ರೀ ಜೆ.ಎಸ್. ಚಿಕ್ಕಣ್ಣವರ್, ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿ.ವಿ) ಮತ್ತು ಸಿಜೆಎಂ, ಬಿಜಾಪುರ	ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬಿಜಾಪುರ –ಖಾಲಿ ಹುದ್ದೆಯಲ್ಲಿ
4	ಶ್ರೀ ಆರ್.ಬಿ. ಧರ್ಮಗೌಡರ್, 9ನೇ ಲಘು ವ್ಯವಹಾರಗಳ ಹೆಚ್ಚುವರಿ ನ್ಯಾಯಾಧೀಶರು, ಬೆಂಗಳೂರು.	ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಗುಲ್ಬರ್ಗಾ –ಖಾಲಿ ಹುದ್ದೆಯಲ್ಲಿ
5	ಶ್ರೀಮತಿ ಶ್ರೀದೇವಿ ಎಸ್. ಅಂಗಡಿ, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಹಿ.ವಿ), ಕೋಲಾರ	ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ದಾವಣಗೆರೆ –ಖಾಲಿ ಹುದ್ದೆಯಲ್ಲಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 842

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

HIGH COURT OF KARNATAKA

NOTIFICATION

No. HCE 110/2009, Bangalore, Dated: 29th April 2009

Sri R.S. Patil, Additional Registrar General, High Court Circuit Bench, Gulbarga is granted Earned Leave for 10 days from 4.2.2009 to 13.2.2009 (bdi) on medical grounds with permission to avail general holidays on 14.2.2009 and 15.2.2009. Sri C. Channegowda, Deputy Registrar of this office is placed in additional charge of the duties of the above officer during the said period.

Further, he is granted Earned Leave for 27 days from 2.3.2009 to 28.3.2009 (bdi) on private affairs with permission to avail general holidays on 1.3.2009 & 29.3.2009 Sri M.S. Raghavendra, Deputy Registrar of this Office is placed in additional charge of the duties of the above officer during the said period.

Sri R.S. Patil, Additional Registrar General, High Court Circuit Bench, Gulbarga of this office is reposted to the same post on expiry of the said leave periods.

P.R. 845

NARENDRA KUMAR GUNAKI

Registrar (Judicial)

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜುಲೈ ೨೩, ೨೦೦೯ (ಶ್ರಾವಣ ೧, ಶಕ ವರ್ಷ ೧೯೩೧)	ಸಂಚಿಕೆ ೩೦

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ ವಿಭಾಗ, ಭದ್ರಾವತಿ

ಅಧಿಸೂಚನೆ

ಸಂಖ್ಯೆ: ಎ3–ಪಿಓಎನ್–ಪಿಆರ್–7/2009–10, ದಿನಾಂಕ:22ನೇ ಜೂನ್, 2009

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಅಪರಾಧ ಪ್ರಕರಣ ಸಂಬಂಧ ಕೆಳಕಂಡ ವಾಹನಗಳನ್ನು ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯದ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್–71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ಕ್ರ. ಸಂ.	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1.	ವಲಯ ಅರಣ್ಯಾಧಿಕಾರಿ, ತರೀಕೆರೆ ಅರಣ್ಯ ಮೊಕದ್ದಮೆ ನಂ.32/2009–10, ದಿನಾಂಕ:14.06.2009.	407 ವ್ಯಾನ್ ಸಂಖ್ಯೆ: ಕೆಎ–18–3440 ಹಾಗೂ ಬೀಟೆ 3=0.343 ಎಂ3 ಮತ್ತು ಬಿಲ್ವಾರ 5=0.652 ಎಂ3	497ST21CUQ726604	809811

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾಧ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳ ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಟಿ. ಹೀರಾಲಾಲ್
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

ಪಿ.ಆರ್.567

ಆರ್ಥಿಕ ಇಲಾಖೆ

ಅಧಿಕೃತ ಜ್ಞಾಪನ

ಸಂಖ್ಯೆ:ಆಇ 15 ಸಉಲಾ 2009, ಬೆಂಗಳೂರು, ದಿನಾಂಕ:24ನೇ ಜೂನ್, 2009

ವಿಷಯ: ದಿನಾಂಕ:01.01.2009ರಲ್ಲಿದ್ದಂತೆ ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಚುರಪಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಕೃತ ಜ್ಞಾಪನ ಪತ್ರಸಂಖ್ಯೆ: ಆಇ 40 ಸಉಲಾ 2008, ದಿನಾಂಕ:22.08.2008.

2) ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ: ಸಉಸಿ(3)90/2008-09, ದಿನಾಂಕ:11.02.2009.

ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಯಲ್ಲಿನ ದಿನಾಂಕ:01.01.2009ರಲ್ಲಿದ್ದಂತೆ ಸಹಾಯಕ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

ಕ್ರ. ಸಂ.	ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ದಿನಾಂಕ	ಅರ್ಹತಾ ದಿನಾಂಕ
1.	ಜಿ.ಎಂ. ಶೆಡೋಳೆ	25.09.1952	25.11.1977	11.12.1988	11.12.1988
2.	ಪಿ.ದೇವೇಂದ್ರಸ್ವಾಮಿ	08.09.1951	05.11.1981	01.04.1990	01.04.1990
3.	ಸಿ. ಕೃಷ್ಣಪ್ಪ	09.06.1955	01.10.1981	01.04.1990	01.04.1990
4.	ಹೆಚ್. ರುದ್ರಪ್ಪ	01.06.1954	27.03.1984	01.06.1992	01.06.1992
5.	ಟಿ. ಪುಟ್ಟಸ್ವಾಮಿ	01.05.1954	01.12.1983	28.05.1992	28.05.1992
6.	ಮಹದೇವ ಮಡಿವಾಳ	01.04.1953	11.07.1985	17.11.1992	16.11.1992
7.	ಎಲ್. ರಂಗಯ್ಯ	29.09.1962	02.09.1985	11.07.1993	11.07.1993
8.	ಶಂಕರ್ ಭೀ. ನಾಯಕವಾಡಿ	20.05.1958	30.03.1984	04.08.1995	04.08.1995
9.	ಶಿವಾನಂದ	18.05.1955	03.04.1984	04.08.1995	04.08.1995
10.	ಕೆ. ಸಿದ್ದಪ್ಪ	07.10.1956	26.03.1984	04.12.1995	04.12.1995
11.	ಎಂ.ಕೆ. ಹೆಗಡೆ	14.06.1959	03.04.1984	04.12.1995	04.12.1995
12.	ಎಂ.ಬಿ. ಸಿದ್ದರಾಜು	08.05.1952	30.09.1985	20.12.1995	04.12.1995
13.	ಎಸ್.ಆರ್. ದುಂಡಗಿ	20.07.1961	30.03.1984	03.08.2001	02.08.2001
14.	ಎಸ್. ಶ್ರೀನಿವಾಸಯ್ಯ	10.04.1954	04.04.1984	02.08.2001	02.08.2001
15.	ಕೆ. ಸುಲೋಚನ	12.07.1957	29.03.1984	03.08.2001	02.08.2001
16.	ಎಂ.ಎಸ್. ಪಾಟೀಲ್	20.07.1956	26.03.1984	03.08.2001	02.08.2001
17.	ವಿ. ಕಲಾವತಿ	22.10.1964	02.09.1985	04.08.2001	02.08.2001
18.	ಎಂ.ಎ. ಮೂಡಲಗಿ	01.06.1960	04.09.1985	03.08.2001	02.08.2001
19.	ಕೆ.ಆರ್. ನಾಗೇಂದ್ರರಾವ್	28.04.1960	09.09.1985	09.08.2001	02.08.2001
20.	ಚಂದ್ರೇಗೌಡ	18.07.1961	04.09.1985	03.08.2001	02.08.2001
21.	ಸಿ. ಪುಟ್ಟರಾಜು	25.06.1960	25.09.1985	03.08.2001	02.08.2001
22.	ಬಿ. ಜಯಪ್ಪ	03.06.1962	24.11.1988	03.08.2001	02.08.2001
23.	ಬಿ.ಜಿ. ಮಲ್ಲೇದೇವರು	08.06.1954	05.09.1985	20.09.2001	13.09.2001
24.	ಜರೀನಾ ಎಂ. ಶೇಖ್	28.05.1954	06.09.1985	20.09.2001	13.09.2001
25.	ನಾಡಗಿರಿ ಶಂಕರ್ ಆರ್.	19.07.1961	25.11.1988	18.09.2001	13.09.2001
26.	ಪಿ. ಲಿಂಗಪ್ಪ	25.12.1954	02.09.1985	15.10.2004	03.09.2004
27.	ರಾಜಶೇಖರಯ್ಯ	01.06.1960	03.09.1985	13.12.2007	01.12.2007
28.	ಜಿ.ಕೆ. ಗೌಡರ್	01.03.1960	10.09.1985	13.12.2007	01.12.2007

ಕ್ರ. ಸಂ.	ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ದಿನಾಂಕ	ಅರ್ಹತಾ ದಿನಾಂಕ
29.	ಮಹಮದ್ ಹುಸೇನ್	20.08.1959	03.07.1985	19.12.2007	01.12.2007
30.	ಡಿ. ನಾರಾಯಣಸ್ವಾಮಿ	25.07.1962	26.11.1988	12.12.2007	01.12.2007

ಈ ಜೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದರೆ ಅಂತಹ ಅಧಿಕಾರಿಗಳು ಈ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕದಿಂದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳನ್ನು ಇಲಾಖಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು, ಈ ಅವಧಿಯೊಳಗೆ ಬರುವ ಆಕ್ಷೇಪಣೆಗಳನ್ನು ಪರಿಗಣಿಸಿ ಈ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಎನ್. ಶ್ರೀನಿವಾಸ ಮೂರ್ತಿ

ಪಿ.ಆರ್.570 ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಇವರ ನಡವಳಿಕೆಗಳು

ನಂ.ಡಿಆರ್‌ಟಿ/ಡಿಎಲ್‌ಎಸ್/355/ಸಿಆರ್-112/2000-01, ದಿನಾಂಕ:25ನೇ ಮಾರ್ಚ್, 2009

ವಿಷಯ: ಸಮಾಪನೆಗೊಂಡಿರುವ ರೇಷ್ಮೆ ಬೆಳೆಗಾರರ ಹರಿಜನ ರೈತರ ನೀರಾವರಿ ಬಾವಿ ಸಹಕಾರ ಸಂಘ ನಿಯಮಿತ, ಗುನ್ನಾಗರ ಕುಣಿಗಲ್ ತಾಲ್ಲೂಕು ಈ ಸಂಘದ ನೋಂದಣಿಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮಸಂಖ್ಯೆ ಆದೇಶ ದಿನಾಂಕ:24.03.2001.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/2001 ದಿನಾಂಕ:21.11.2001.

3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ಪ್ರಸ್ತಾವನೆ ಪತ್ರಸಂಖ್ಯೆ: ಸನಿ32/ಡಿಎಲ್‌ಎಸ್/309/2005-06 ದಿನಾಂಕ:24.02.2009.

ಪ್ರಸ್ತಾವನೆ:

ರೇಷ್ಮೆ ಬೆಳೆಗಾರರ ಹರಿಜನ ರೈತರ ನೀರಾವರಿ ಬಾವಿ ಸಹಕಾರ ಸಂಘ ನಿಯಮಿತ, ಗುನ್ನಾಗರ, ಕುಣಿಗಲ್ ತಾಲ್ಲೂಕು ಈ ಸಂಘದ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿದ್ದು ಉಲ್ಲೇಖಿತ (1)ರ ಈ ಕಛೇರಿ ಆದೇಶದಲ್ಲಿ ಸಂಘವನ್ನು ಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಕುಣಿಗಲ್ ಇವರನ್ನು ಸಮಾಪನಾಧಿಕಾರಿಯಾಗಿ ನೇಮಿಸಲಾಗಿತ್ತು.

ಉಲ್ಲೇಖ (3)ರ ಪತ್ರದೊಂದಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರು ಸಂಘದ ನೋಂದಣಿ ರದ್ಧತಿಗೆ ಪ್ರಸ್ತಾವನೆ ಸಲ್ಲಿಸಿ ಸಂಘದ ನೊಂದಣಿಯನ್ನು ರದ್ದುಪಡಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಮಾಪನಾಧಿಕಾರಿಗಳ ಸಭಾ ನಡವಳಿಕೆ ದಿನಾಂಕ:01.07.2006ರ ಆಸ್ತಿ ವಿಭಾಗದ ವಿಷಯ ಸಂಖ್ಯೆ (1)ರ ನಿರ್ಣಯದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಉಳಿತಾಯ ಖಾತೆಯಲ್ಲಿದ್ದ ರೂ.5,272-20 ಗಳನ್ನು ಡ್ರಾ ಮಾಡಿ, ಸಹಕಾರ ಅಭಿವೃದ್ಧಿ ನಿಧಿಗೆ ರೂ.2,471-20 ನ್ನು ಪಾವತಿಸಲು ತೀರ್ಮಾನಿಸಿ ಪಾವತಿಸಿರುವ ಚಲನ್ ಸಲ್ಲಿಸಿರುತ್ತಾರೆ. ಸಮಾಪನಾಧಿಕಾರಿಯ ನಿರ್ವಹಣಾ ವೆಚ್ಚ ಹಾಗೂ ಸಂಭಾವನೆಯಾಗಿ ಒಟ್ಟು ರೂ.2,801-00 ಭರಿಸಿರುತ್ತಾರೆ.

ಸಂಘದಲ್ಲಿ ವಸೂಲಿಯಾಗುವಂತಹ ಇತರೆ ಯಾವುದೇ ಆಸ್ತಿಗಳು ಇಲ್ಲದ ಕಾರಣ ಅವುಗಳನ್ನು ನಷ್ಟದ ಖಾತೆಗೆ ವರ್ಗಾಯಿಸಿರುತ್ತಾರೆ. ಜವಾಬ್ದಾರಿಗಳನ್ನು ವಿಲೇವಾರಿ ಮಾಡಲು ಸಂಘದಲ್ಲಿ ಯಾವುದೇ ರಹ ಇಲ್ಲದ ಕಾರಣ ಆಸ್ತಿ ಜವಾಬ್ದಾರಿಗಳನ್ನು ಶೂನ್ಯ ಮಾಡಿ ಸಂಘದ ನೋಂದಣಿ ರದ್ಧತಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಸಂಘದ ನೋಂದಣಿಯನ್ನು ರದ್ಧುಪಡಿಸಲು ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ನಮೂದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 75 ಹಾಗೂ ಉಲ್ಲೇಖ (2)ರ ಸರ್ಕಾರದ ಅಧಿಸೂಚನೆಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಡಿ. ಪಾಂಡುರಂಗಪ್ಪ, ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಆದ ನಾನು ಸಮಾಪನೆಗೊಂಡಿರುವ ರೇಷ್ಮೆ ಬೆಳೆಗಾರರ ಹರಿಜನ ರೈತರ ನೀರಾವರಿ ಬಾವಿ ಸಹಕಾರ ಸಂಘ ನಿಯಮಿತ, ಗುನ್ನಾಗರ, ಕುಣಿಗಲ್ ತಾಲ್ಲೂಕು ಈ ಸಂಘದ ನೋಂದಣಿ ಸಂಖ್ಯೆ: ಎಆರ್‌ಟಿ/ಸಿ-1/ಎಂಕೆಟಿ/7990/80-81 ದಿನಾಂಕ:13.03.1981ನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ಧುಪಡಿಸಿದೆ. ಇಂದಿನಿಂದ ಸಂಘವು ಅಸ್ತಿತ್ವದಲ್ಲಿರುವುದಿಲ್ಲ ಮತ್ತು ವಿಸರ್ಜಿತವಾಗಿರುತ್ತದೆ.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ:25.03.2009 ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು,

ಪಿ.ಆರ್.331 ತುಮಕೂರು ಜಿಲ್ಲೆ, ತುಮಕೂರು.

ಕರ್ನಾಟಕ ಅರಣ್ಯ ಇಲಾಖೆ

ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಹುಣಸೂರು ವನ್ಯಜೀವಿ ವಿಭಾಗ, ಹುಣಸೂರುರವರ ಕಛೇರಿ ಆದೇಶದ ಉದ್ಧರಣ

ಕಛೇರಿ ಆದೇಶ ಸಂಖ್ಯೆ:150/2008-09, ದಿನಾಂಕ:23/26ನೇ ಮಾರ್ಚ್, 2009

ವಿಷಯ: ಶ್ರೀ ಜೆ.ಕೆ. ಮುತ್ರಾಮ ಆನೆಕವಾಡಿ ಕಲ್ಲಹಳ್ಳ ವನ್ಯಜೀವಿ ವಲಯ ರವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ಬಗ್ಗೆ.

ಉಲ್ಲೇಖ:1) ವಲಯ ಅರಣ್ಯಾಧಿಕಾರಿಗಳು, ವನ್ಯಜೀವಿ ವಲಯ, ಕಲ್ಲಹಳ್ಳ ಇವರ ಪತ್ರ ಸಂಖ್ಯೆ:122/04-05, ದಿನಾಂಕ:24.07.2004.

2) ಈ ಕಛೇರಿಯಿಂದ ನೀಡಿದ ಕಾರಣ ಕೇಳಿ ಸೂಚನಾ ಪತ್ರಸಂಖ್ಯೆ: ಎ2: ಸಿಬ್ಬಂದಿ:ಜಿಎಲ್:821/04-05, ದಿನಾಂಕ:22.09.2006.

3) ಈ ಕಛೇರಿಯಿಂದ ನೀಡಿದ ಅಂತಿಮ ನೋಟೀಸ್ ದಿನಾಂಕ:04.12.2006.

4) ದಿನಾಂಕ:19.02.2007ರಲ್ಲಿ ಮೈಸೂರು ಮಿತ್ರ ದಿನಪತ್ರಿಕೆಯಲ್ಲಿ ಪ್ರಕಟಣೆ.

5) ದಿನಾಂಕ:19.02.2007ರಲ್ಲಿ ಕನ್ನಡಪ್ರಭ ದಿನಪತ್ರಿಕೆ ಪ್ರಕಟಣೆ.

6) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ರವರ ಪತ್ರ ಸಂಖ್ಯೆ:ಬಿ3: ಸಿಬ್ಬಂದಿ: ಸಿಆರ್.65/07-08, ದಿನಾಂಕ:24.08.2007.

7) ಈ ಕಛೇರಿಯಿಂದ ನೀಡಿದ ದೋಷಾರೋಪಣಪಟ್ಟಿ ಸಂಖ್ಯೆ: ಎ2:ಸಿಬ್ಬಂದಿ:ಜಿಎಲ್.821/04-05, ದಿನಾಂಕ:05.11.2007.

8) ಈ ಕಛೇರಿ ಅಧಿಕೃತಜ್ಞಾಪನಪತ್ರ ಸಂಖ್ಯೆ:ಎ2:ಸಿಬ್ಬಂದಿ:ಜಿಎಲ್.821/04-05, ದಿನಾಂಕ:22.01.2008.

9) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ವಿಚಾರಣಾಧಿಕಾರಿಗಳು ನಾಗರಹೊಳೆ ಇವರ ವಿಚಾರಣಾ ವರದಿ ಪತ್ರಸಂಖ್ಯೆ: ಸಅಸಂ:ನಾಹೊ:ವಜಿ:ಇವಿ/08-09, ದಿನಾಂಕ:12.03.2009.

ಪ್ರಸ್ತಾವನೆ:

ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ, ಕಲ್ಲಹಳ್ಳ ವನ್ಯಜೀವಿ ವಲಯ ಇವರು ಅನುಕಂಪದ ಆಧಾರದ ಮೇಲೆ ದಿನಾಂಕ;28.01.2004ರಂದು ಸರ್ಕಾರಿ ಕರ್ತವ್ಯಕ್ಕೆ ನೇಮಕಗೊಂಡಿದ್ದು, ಸದರಿಯವರು ದಿನಾಂಕ:03.07.2004 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ಈ ಬಗ್ಗೆ ಉಲ್ಲೇಖ (1)ರಲ್ಲಿ ವಲಯ ಅರಣ್ಯಾಧಿಕಾರಿಗಳು ವರದಿ ಮಾಡಿರುತ್ತಾರೆ.

ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ ಇವರಿಗೆ ದಿನಾಂಕ:22.08.2004 ರಂದು ಕಾರಣ ಕೇಳಿಕೆ ನೋಟಿಸ್ ಜಾರಿ ಮಾಡಿ 7 ದಿನದ ಒಳಗಾಗಿ ಲಿಖಿತ ಹೇಳಿಕೆ ಅಥವಾ ಸರ್ಕಾರಿ ಕರ್ತವ್ಯಕ್ಕೆ ಗೈರುಹಾಜರಾದ ಕಾರಣಗಳನ್ನು ವಿವರಗಳೊಂದಿಗೆ ವರದಿ ಮಾಡುವಂತೆ ಸೂಚಿಸಿ ಸ್ವೀಕೃತಿ ಪಡೆಯಲಾಗಿತ್ತು. ವಲಯ ಅರಣ್ಯಾಧಿಕಾರಿಗಳು ಕಲ್ಲಹಳ್ಳ ವನ್ಯಜೀವಿ ವಲಯ ಇವರು ದಿನಾಂಕ:27.09.2004 ರಲ್ಲಿ ಈ ಕಛೇರಿಗೆ ವರದಿ ಮಾಡಿ ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ ಇವರು ದಿನಾಂಕ:03.07.2004 ರಿಂದ 09.09.2004 ರವರೆಗೆ ಅನಧಿಕೃತ ಗೈರುಹಾಜರಿ ಇದ್ದು ನೋಟಿಸ್ ನೀಡಿದ ಪ್ರಯುಕ್ತ ನೌಕರರು ದಿನಾಂಕ:10.09.2004 ರಂದು ಕರ್ತವ್ಯಕ್ಕೆ ಹಾಜರಿರುತ್ತಾರೆ ಎಂಬುದಾಗಿ ವರದಿ ನೀಡಿರುತ್ತಾರೆ. ನಂತರ ನೌಕರರು ದಿನಾಂಕ:05.01.2006 ರವರೆಗೆ ಕರ್ತವ್ಯ ನಿರ್ವಹಿಸಿ, ಮೇಲಾಧಿಕಾರಿಗಳ ಅನುಮತಿ ಹಾಗೂ ಯಾವುದೇ ರಜೆ ಅರ್ಜಿ ಸಲ್ಲಿಸದೆ ಸರ್ಕಾರಿ ಕರ್ತವ್ಯಕ್ಕೆ ಗೈರುಹಾಜರಿ ಆಗಿರುತ್ತಾರೆ ಎಂದು ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ ಕಲ್ಲಹಳ್ಳ ಇವರು ನೀಡಿದ ವರದಿಯನ್ವಯ ಈ ಕಛೇರಿಯಿಂದ ನೌಕರರಿಗೆ ದಿನಾಂಕ:22.09.2009 ರಂದು ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದ್ದು ನೌಕರರು ಸದರಿ ನೋಟಿಸನ್ನು ಖುದ್ದು ದಿನಾಂಕ:06.10.2006ರಂದು ಸ್ವೀಕರಿಸಿ, ಸ್ವೀಕೃತಿ ನೀಡಿ, ಯಾವುದೇ ಲಿಖಿತ ಹೇಳಿಕೆ ನೀಡದೆ ಇದು, ದಿನಾಂಕ:10.10.2006 ರಂದು ಪುನಃ ಕರ್ತವ್ಯಕ್ಕೆ ಹಾಜರಾಗಿದ್ದು, ನೌಕರರು ಗೈರು ಹಾಜರಿಯಾಗಿರುವುದಕ್ಕೆ ಕೇಳಲಾದ ಕಾರಣ ಕೇಳಿ ನೋಟಿಸ್‌ಗೆ ಯಾವುದೇ ಉತ್ತರ ನೀಡದೆ ಇರುವ ಬಗ್ಗೆ ನೌಕರರಿಂದ ಲಿಖಿತ ಸಮಜಾಯಿಸಿ ಪಡೆದು ಸಲ್ಲಿಸುವಂತೆ ವಲಯ ಅರಣ್ಯಾಧಿಕಾರಿಗಳು, ಕಲ್ಲಹಳ್ಳ ವನ್ಯಜೀವಿ ವಲಯ ಇವರಿಗೆ ದಿನಾಂಕ:15.11.2006ರಂದು ಸೂಚಿಸಲಾಗಿತ್ತು.

ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ ಕಲ್ಲಹಳ್ಳ ಇವರು ದಿನಾಂಕ:26.11.2006 ರಂದು ಈ ಕಛೇರಿಗೆ ವರದಿ ಮಾಡಿ ನೌಕರರು ದಿನಾಂಕ:10.10.2006 ರಂದು ಕರ್ತವ್ಯಕ್ಕೆ ಹಾಜರಾಗಿ ದಿನಾಂಕ:01.11.2006 ರವರೆಗೆ ಆನೆಶಿಬಿರದಲ್ಲಿ ಕರ್ತವ್ಯ ನಿರ್ವಹಿಸಿ ದಿನಾಂಕ:02.11.2006 ರಿಂದ ಪುನಃ ಕರ್ತವ್ಯಕ್ಕೆ ಗೈರುಹಾಜರಿಯಾಗಿರುತ್ತಾರೆ ಎಂದು ವರದಿ ಮಾಡಿ ಸದರಿ ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ನೌಕರರು ಸರ್ಕಾರಿ ಕರ್ತವ್ಯಕ್ಕೆ ಪದೇ ಪದೇ ಗೈರು ಹಾಜರಾಗಿ ಮೇಲಾಧಿಕಾರಿಗಳಿಂದ ಅನುಮತಿ ಪಡೆಯದೆ ಕೇಂದ್ರಸ್ಥಾನ ಬಿಡುವುದು ಹಾಗೂ ಕಛೇರಿಯಿಂದ ನೀಡಿದ ಕಾರಣ ಕೇಳಿ ನೋಟಿಸ್‌ಗೆ ಉತ್ತರ ನೀಡದೆ ನಿರ್ಲಕ್ಷತನ ತೋರಿದ ಪ್ರಯುಕ್ತ ಈ ಕಛೇರಿಯಿಂದ ಉಲ್ಲೇಖ (3)ರಲ್ಲಿ ದಿನಾಂಕ:04.12.2006ರಲ್ಲಿ ಅಂತಿಮವಾಗಿ ನೋಟಿಸ್ ಜಾರಿ ಮಾಡಿ 3

ವರ್ಷದ ಸೇವಾ ಅವಧಿಯಲ್ಲಿ ಒಂದು ವರ್ಷಗಳ ಹೆಚ್ಚಿನ ಅವಧಿ ಸರ್ಕಾರಿ ಕರ್ತವ್ಯದಲ್ಲಿ ಅನಧಿಕೃತ ಗೈರು ಹಾಜರಿ ಇರುವುದು ಕಾನೂನು ಬಾಹಿರವಾಗಿದ್ದು, ಪದೇ ಪದೇ ಸರ್ಕಾರಿ ಕರ್ತವ್ಯಕ್ಕೆ ಗೈರು ಹಾಜರಿ ಆಗಿರುವುದನ್ನು ಪರಿಶೀಲಿಸಿದಲ್ಲಿ ಸರ್ಕಾರಿ ಸೇವೆಯಲ್ಲಿ ಆಸಕ್ತಿ ಇಲ್ಲವೆಂದು ಸ್ಪಷ್ಟವಾಗಿ ತಿಳಿಯಬಹುದಾಗಿದ್ದು, ಕೆ.ಸಿ.ಎಸ್.ಆರ್. ನಿಯಮ–108ರ ಪ್ರಕಾರ ಸೇವೆಯಿಂದ ವಜಾಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸೂಚಿಸಲಾಗಿತ್ತು.

ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಕಲ್ಲಹಳ್ಳ ಇವರು ಈ ಕಛೇರಿಗೆ ದಿನಾಂಕ:02.01.2007 ರಂದು ವರದಿ ಮಾಡಿ ಶ್ರೀ ಜೆ.ಕೆ. ಮುತ್ರಾಮ ಬಿನ್ ಲೇ॥ ಜೆ.ಕೆ.ಕುಳ್ಳ, ಆನೆಕವಾಡಿ, ಇವರು ದಿನಾಂಕ:02.11.2006 ರಿಂದ ಸರ್ಕಾರಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಆಗಿದ್ದು, ಈವರೆಗೆ ನೀಡಿದ ನೋಟಿಸ್‌ಗೆ ಯಾವುದೇ ಉತ್ತರ ನೀಡದೆ ಇದ್ದು ಬೇಜವಾಬ್ದಾರಿತನ ತೋರಿರುವುದರಿಂದ ಮತ್ತು ಮೇಲಾಧಿಕಾರಿಗಳ ಆದೇಶ ಪಾಲಿಸದೇ ಇರುವುದರಿಂದ ಸದರಿ ನೌಕರರ ವಿರುದ್ಧ ಸಿ.ಸಿ.ಎ. ನಿಯಮಗಳನುಸಾರ ಶಿಸ್ತು ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ.

ವಲಯ ಅರಣ್ಯಾಧಿಕಾರಿಗಳು ಕಲ್ಲಹಳ್ಳ ವನ್ಯಜೀವಿ ವಲಯ ಇವರು ಮಾಡಿರುವ ಶಿಫಾರಸ್ಸು ಅನ್ವಯ ಸಿ.ಸಿ.ಎ. ನಿಯಮಾವಳಿ 28(ಕ)ರ ಅನುಸಾರವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಿ ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕೋರಲಾಗಿತ್ತು. ಈ ಕಛೇರಿ ಕೋರಿಕೆ ಅನ್ವಯ ಉಲ್ಲೇಖ ಪತ್ರ (4)ರಲ್ಲಿ ಸೂಚಿಸಿರುವಂತೆ ದಿನಾಂಕ:19.02.2007ರಂದು ಮೈಸೂರು ಮಿತ್ರ ದಿನಪತ್ರಿಕೆಯಲ್ಲಿ ಅಂತಿಮ ನೋಟಿಸ್ ಪ್ರಕಟಣೆ ಆಗಿರುತ್ತದೆ ಹಾಗೂ ಉಲ್ಲೇಖ (5)ರಲ್ಲಿ ಸೂಚಿಸಿರುವಂತೆ ದಿನಾಂಕ:19.02.2007ರಂದು ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ಸಹ ಪ್ರಕಟವಾಗಿದ್ದು 3 ದಿನದ ಒಳಗಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿತ್ತು.

ಶ್ರೀ ಜೆ.ಕೆ. ಮುತ್ರಾಮ, ಅನೆಕವಾಡಿ ಇವರು ಒಂದು ವರ್ಷಗಳ ಸರ್ಕಾರಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಆಗಿರುವ ಬಗ್ಗೆ ಸದರಿ ನೌಕರರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವಂತೆ ಈ ಕಛೇರಿಯಿಂದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಪತ್ರ ಉಲ್ಲೇಖ (6)ರಲ್ಲಿ ಈ ಕಛೇರಿಗೆ ಪತ್ರ ಬರೆದು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳಲ್ಲಿ ಅನುಸರಿಸಬೇಕಾದ ನಿಯಮ–11 ಗಳ ಪ್ರಕಾರ ನೌಕರರ ಅಧಿಕೃತ ಗೈರುಹಾಜರಿ ಬಗ್ಗೆ ವಿಚಾರಣೆ ನಡೆಸಿ ನಂತರ ಸೂಕ್ತ ಕ್ರಮ ಜರುಗಿಸುವಂತೆ ಆದೇಶಿಸಿರುವ ಮೇರೆಗೆ ಉಲ್ಲೇಖ ಪತ್ರ (7)ರಲ್ಲಿ ಸದರಿ ನೌಕರರ ಮೇಲೆ ದೋಷರೋಪಣ ಪಟ್ಟಿಯನ್ನು ತಯಾರಿಸಲಾಗಿತ್ತು. ಉಲ್ಲೇಖ ಪತ್ರ (8)ರಲ್ಲಿ ಈ ಕಛೇರಿಯಿಂದ ಅಧಿಕೃತ ಜ್ಞಾಪನಾ ಪತ್ರ ಹೊರಡಿಸಿ ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ ಇವರ ಮೇಲಿನ ಕರ್ತವ್ಯ ನಿರ್ಲಕ್ಷತೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ವಿಚಾರಣೆ ನಡೆಸಿ ವರದಿ ನೀಡುವಂತೆ ದಿನಾಂಕ:22.01.2008 ರಂದು ಆದೇಶ ನೀಡಿ ಶ್ರೀ ಸಿ.ಪಿ. ದುರ್ಗೇಗೌಡ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪವಿಭಾಗ, ನಾಗರಹೊಳೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ನಾಗರಹೊಳೆ ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿ ಆದೇಶ ನೀಡಲಾಗಿತ್ತು.

ಶ್ರೀ ಸಿ.ಪಿ. ದುರ್ಗೇಗೌಡ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಿಚಾರಣಾಧಿಕಾರಿಗಳು ಉಲ್ಲೇಖ ಪತ್ರ (9)ರಲ್ಲಿ ದಿನಾಂಕ:12.03.2009ರಲ್ಲಿ ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ, ಕಲ್ಲಹಳ್ಳ ವನ್ಯಜೀವಿ ವಲಯ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಶ್ರೀ ಜೆ.ಕೆ. ಮುತ್ರಾಮ ಇವರ ಸ್ವಂತ ವಿಳಾಸಕ್ಕೆ ನೋಟಿಸ್ ಕಳುಹಿಸಿ ದಿನಾಂಕ:19.05.2008 ಮತ್ತು 14.06.2008ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದು, ನೌಕರರು ವಿಳಾಸದಲ್ಲಿ ಇಲ್ಲದಿರುವುದಾಗಿ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಪತ್ರ ಅಂಚೆ ಇಲಾಖೆಯಿಂದ ವಾಪಸ್ ಬಂದಿರುವ ಪ್ರಯುಕ್ತ ದಿನಾಂಕ:30.07.2008ರಂದು ವಿಚಾರಣೆ ಮುಂದೂಡಿ ಖುದ್ದು ನೋಟಿಸ್ ಜಾರಿ ಮಾಡಲು ಇಲಾಖಾ ನೌಕರರನ್ನು ಅ... ವಿಳಾಸಕ್ಕೆ ಕಳುಹಿಸಿ ನೋಟಿಸ್ ಜಾರಿ ಮಾಡುವಂತೆ ಸೂಚಿಸಿದ್ದು, ಶ್ರೀ ಜೆ.ಕೆ. ಮುತ್ರಾಮ ಇವರು ಆ ವಿಳಾಸದಲ್ಲಿ ಇಲ್ಲದೆ ಇದ್ದ ಕಾರಣದಿಂದ ಕಾನೂನು ರೀತ್ಯಾ ಮಹಜರ್ ಕ್ರಮ ಜರುಗಿಸಿ ನೌಕರರ ಮನೆ ಬಾಗಿಲಿಗೆ ನೋಟಿಸನ್ನು ಅಂಟಿಸಿ ಬಂದು ವರದಿ ಮಾಡಿದ್ದು, ಸದರಿ ದಿನಾಂಕದಂದು ವಿಚಾರಣೆಗೆ ಹಾಜರಾಗದ ಕಾರಣ ಮುಂದಿನ ಅಂತಿಮ ವಿಚಾರಣೆಯನ್ನು ದಿನಾಂಕ:25.08.2008ಕ್ಕೆ ಮುಂದೂಡಿ ಇಲಾಖಾ ಪರ ಸಾಕ್ಷಿದಾರರಾದ ವಲಯ ಅರಣ್ಯಾಧಿಕಾರಿಗಳನ್ನು ವಿಚಾರಣೆಗೊಳಪಡಿಸಿ, ವಲಯ ಅರಣ್ಯಾಧಿಕಾರಿ, ಕಲ್ಲಹಳ್ಳ ವನ್ಯಜೀವಿ ವಲಯ ಇವರು ಹೇಳಿಕೆ ನೀಡಿ ಆರೋಪಿತ ನೌಕರರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ಅನೇಕ ಬಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಹುಣಸೂರುರವರು ನೋಟಿಸ್ ಜಾರಿ ಮಾಡಿದ್ದು, ಸದರಿ ನೋಟಿಸನ್ನು ನೌಕರರಿಗೆ ಜಾರಿ ಮಾಡಿ, ನೌಕರರು ನೋಟಿಸ್‌ಗೆ ಯಾವುದೇ ಲಿಖಿತ ಉತ್ತರ ನೀಡದೆ ಕರ್ತವ್ಯ ನಿರ್ಲಕ್ಷತೆ ಹಾಗೂ ಅನಧಿಕೃತ ಗೈರು ಹಾಜರಿ ಆಗಿರುವುದನ್ನು ಸಮರ್ಥಿಸಿದ್ದ ಆಪಾದಿತರಿಗೆ ನೀಡಿದ ನೋಟಿಸನ್ನು ಸ್ಪಷ್ಟೀಕರಿಸಿ ಅದನ್ನು ನಿಶಾನೆ EXP-2 ಎಂದು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಹುಣಸೂರು ರವರಿಗೆ ಶ್ರೀ ಜೆ.ಕೆ. ಮುತ್ರಾಮ ಇವರ ಮೇಲೆ ಬರೆದಿರುವ ಪತ್ರವನ್ನು ಪರಿಶೀಲಿಸಿ ನಿಶಾನೆ EXP-(3)(a) ಎಂದು ಗುರುತಿಸಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಹುಣಸೂರು ಇವರು ಆಪಾದಿತ ನೌಕರ ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ, ಕಲ್ಲಹಳ್ಳ ವನ್ಯಜೀವಿ ವಲಯ ರವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾದ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದು ಈ ಬಗ್ಗೆ ವಿಚಾರಣೆ ಸಮಯದಲ್ಲಿ ಅವಲೋಕಿಸಿ EXP-5 ಎಂದು ಗುರುತಿಸಿ ಸಮರ್ಥಿಸಿಕೊಂಡಿದ್ದು, ಪಾಟಿ ಸವಾಲು ಏನು ಇಲ್ಲದಿರುವುದರಿಂದ ಅಂತಿಮವಾಗಿ ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ, ಕಲ್ಲಹಳ್ಳ ವನ್ಯಜೀವಿ ವಲಯ ಇವರು ಕರ್ತವ್ಯಕ್ಕೆ ಹಾಜರಾಗದೆ ಅಶಿಸ್ತು ಮತ್ತು ಕರ್ತವ್ಯ ನಿರ್ಲಕ್ಷತೆ ತೋರಿರುವುದು ನಿಜಾಂಶವಾಗಿರುತ್ತದೆ ಎಂಬುದಾಗಿ ವರದಿ ಮಾಡಿರುವುದರಿಂದ ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ, ಕಲ್ಲಹಳ್ಳ ವನ್ಯಜೀವಿ ವಲಯ ಇವರು ದಿನಾಂಕ:02.11.2006 ರಿಂದ ನಿರಂತರವಾಗಿ ಕರ್ತವ್ಯಕ್ಕೆ ಗೈರು ಹಾಜರಾಗಿರುವುದರಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 108ರ ಅನುಸಾರವಾಗಿ ಸರ್ಕಾರಿ ಸೇವೆಯಿಂದ ವಜಾ ಮಾಡುವ ಬಗ್ಗೆ ಕೆಳಕಂಡಂತೆ ಆದೇಶ ನೀಡಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಡಿ. ಯತೀಶ್ ಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಹುಣಸೂರು ಆದ ನಾನು ಆದೇಶಿಸಿರುವುದೇನೆಂದರೆ, ಶ್ರೀ ಜೆ.ಕೆ. ಮುತ್ರಾಮ, ಆನೆಕವಾಡಿ, ಕಲ್ಲಹಳ್ಳ ವನ್ಯಜೀವಿ ವಲಯ ಇವರು ಸರ್ಕಾರಿ ಕರ್ತವ್ಯಕ್ಕೆ ದಿನಾಂಕ:02.11.2006 ರಿಂದ ಗೈರು ಹಾಜರಾಗಿದ್ದು, ಸರ್ಕಾರಿ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸದೆ ಕರ್ತವ್ಯ ಚ್ಯುತಿ ಎಸಗಿದ್ದು, ವಿಚಾರಣೆಯಿಂದ ಸಾಬೀತಾದ ಪ್ರಯುಕ್ತ ಕೆ.ಸಿ.ಎಸ್.ಆರ್. ನಿಯಮಾವಳಿ 108ರ ಅನುಸಾರ ಹಾಗೂ ಸಿ.ಸಿ.ಎ. ನಿಯಮಾವಳಿ ಮತ್ತು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿ 1977 ನಿಯಮ 6ರ ಅಡಿಯಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿ ಆದೇಶಿಸಿದೆ.

ಡಿ. ಯತೀಶ್‌ಕುಮಾರ್

ಪಿ.ಆರ್.361

ಶಿಸ್ತು ಪ್ರಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹುಣಸೂರು ವನ್ಯಜೀವಿ ವಿಭಾಗ, ಹುಣಸೂರು.

KARNATAKA LOKAYUKTA

CORRIGENDUM

No.Compt/LOK/BCD/420/2008/ARE-9, Bangalore, Dated:27th June, 2009

In the Public notice issued by this office in No. Compt/LOK/BCD/420/2008/ARE-9, Dated:10.06.2009, the words "Karnataka Power Corporation Limited" mentioned in the 9th line of first para may be read as **"Karnataka Power Transmission Corporation Limited"**.

Bangalore
Date:27.06.2009
PR-574

By the Order of Hon'ble Lokayukta
MOOSA KUNHI NAYAR MOOLE
Registrar.

COMMERCIAL TAXES DEPARTMENT

OFFICE OF THE ASSISTANT COMMISSIONER OF COMMERCIAL TAXES, LOCAL VAT OFFICE-65, BANGALORE

Present: B.D. Devaiah,

Asst. Commissioner, of Commercial Taxes, LVO-065.

Sub: Loss of blank "F" Form in the case of M/s Carries PIPES AND TUBES(PVT) LTD No.415 166/3A Kempalinganahalli kasaba Hobli Nelamangala, Bangalore Rural Dist-562123.

Ref: Letter Dated:26.02.2009 of M/s CARRIES PIPES AND TUBES(PVT) LTD Nelamangala, Bangalore Rural District.

Preamble:

M/s CARRIES PIPES AND TUBES(PVT) LTD No.415 166/3A Kempalinganahalli, Kasaba Hobli, Nelamangala, Bangalore Rural Dist-562123. is a registered dealer borne on the files of this office bearing TIN 29780225011. The assessee Company in its letter Dated:26.02.2009 has intimated that the following blank "F" Form No.KAF 0261899 to KAF-0261909 (11 No's) issued by the department were lost in transit.

The Company has produced the proof for having filed the complaint to the police authorities for loss of above "F" Form and executed Indeminity Bond in favour of the Government as laid down Rule 12(2) and 12(9) of CST Act 1956.

Since the blank "F" Forms No's KAF 0261899 to KA F 0261909 (11 No's is stated to be lost while in transit, the Forms so lost are treated as in valid/ Hence this order.

Order No. ACCT/LVO-065/2009-10, Dated:15th May, 2009

In view of the circumstances explained above the Blank "F" Forms No.KA F 0261899 to 0621909 (11 No's) are treated as invalid w.e.f.23/01/2008.

Assistant Commissioner of Commercial Taxes,
LVO-065, Bangalore.

Office of the Asst. Commissioner of Commercial Taxes Local Vat Office-065, Bangalore

Notified Authority Under the Rule 6(5) of the CST (Karnataka) rules 1957

No.ACCT/LVO 065/08-09, Dated:15.05.2009 by the Virtue of the Provisions of Rule 12(2) of the CST (Registration & Turnover) Rules 1957 & Rule 6(5) of the CST (Karnataka) Rules 1957 is hereby notified for General Information in Form "F" (Blank described below is declared to be obsolete and invalid.

Number including Code No. of declaration form/s lost destroyed or stolen	Name and address of the dealer to whom declaration form/s is/ are issued by the department with date of issue	Registration Certificate No. of the dealer under CST Act, 1956	The address of the dealer to whom the declaration Is/are sent	Date of issue of Form/s by the dealer	Whether lost/destroyed or stolen	Remarks
KA-F 0261899 to KA-F 0261909	CARRIES PIPES AND TUBES (PVT) LTD. No.415 166/3A Kempalinganahalli Kasaba Hobli, Nelamangala, Bangalore. 23.12.2008.	TIN 29780225011	-	-	LOST	Blank Form

Assistant Commissioner of Commercial
Taxes, LVO-065, Bangalore.

PR-575

ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಬೀದರ ಜಿಲ್ಲೆ, ಬೀದರ

ವಿಷಯ: ಸಮಾಪನೆಗೊಂಡ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಚಿಟ್ಟಾ (ಕೆ) ತಾ: ಬಸವಕಲ್ಯಾಣ ಇದರ ನೊಂದಣಿ ಸಂಖ್ಯೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 75ರನ್ವಯ ರದ್ದುಪಡಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಉನಿಬಿ/ವಿ2/ಸಮಾಪನೆ/2008-09, ದಿನಾಂಕ:16.10.2008.

2) ಸಮಾಪನೆ ಅಧಿಕಾರಿಗಳ ಪ್ರಸ್ತಾವನೆ ದಿನಾಂಕ:11.11.2008.

3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ ಉಪವಿಭಾಗ, ಬೀದರ ಇವರ ಪತ್ರ ಸಂಖ್ಯೆ/ ಸನಿಬಿ1/ವಿ7/ ಸಮಾಪನೆ/2008-2009, ದಿನಾಂಕ:20.11.2008.

ಪ್ರಸ್ತಾವನೆ:

ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಚಿಟ್ಟಾ (ಕೆ) ತಾ: ಬಸವಕಲ್ಯಾಣ ಇದರ ಕಾರ್ಯ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದ ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹುಮನಾಬಾದ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅದರಂತೆ ಸಮಾಪನಾಧಿಕಾರಿಗಳು ಪುನಃಶ್ಚೇತನಗೊಳಿಸಲು ಯಾವ ಸದಸ್ಯರಲ್ಲಿ ಆಸಕ್ತಿಯಿರುವುದಿಲ್ಲವೆಂದು ತೀರ್ಮಾನಿಸಿರುತ್ತಾರೆ. ಲಭ್ಯವಿದ್ದ ದಾಖಲಾತಿಗಳ ಪ್ರಕಾರ ಸಂಘದಲ್ಲಿ ಯಾವುದೇ ಆಸ್ತಿ ಜವಾಬ್ದಾರಿ ಇರುವುದಿಲ್ಲ ಪ್ರಯುಕ್ತ ಇದರ ನೊಂದಣಿಯನ್ನು

ರದ್ದುಪಡಿಸಲು ಉಲ್ಲೇಖ (2)ರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ ರವರು ಸಹ ಸದರಿ ಸಂಘದಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಏನು ಇರುವುದಿಲ್ಲ. ಮತ್ತು ಸಂಘದಲ್ಲಿ ಯಾವ ಆಸ್ತಿ ವಸೂಲಿ ಮಾಡಲು ಬರುವುದಿಲ್ಲ. ಮತ್ತು ಇದರ ಕಾರಣದಿಂದ ಜವಾಬ್ದಾರಿಯನ್ನು ಇತ್ಯಾರ್ಥಗೊಳಿಸಲು ಸಾಧ್ಯವಿಲ್ಲವೆಂದು ಪರಿಗಣಿಸಿ ಇದರ ನೊಂದಣಿ ಸಂಖ್ಯೆ: ಸನಿಜಿ1/ವಿ4/ನೊಂದಣಿ/33704/2003-04/ ದಿನಾಂಕ:31.03.2004 ರದ್ದುಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಆದುದರಿಂದ ಕೆಳಕಂಡ ಆದೇಶ.

ಆದೇಶ

ಸಂಖ್ಯೆ: ಉನಿಬಿ/ವಿ1/ಸಮಾಪನೆ/ಸಿಆರ್/2008-2009, ದಿನಾಂಕ:31ನೇ ಡಿಸೆಂಬರ್, 2008

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್ಎಂ/200 ದಿನಾಂಕ:21.11.2001 ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತ ಚನ್ನಾಣ ಗೋಪಾಲ ಸಹಕಾರ ಸಂಘಗಳ ಉಪನಿಬಂಧಕರು, ಬೀದರ ಜಿಲ್ಲೆ, ಬೀದರ ಆದ ನಾನು ಸಮಾಪನೆಗೊಂಡ ಮಹಿಳಾ ಹಾಲು ಉತ್ಪಾದಕರ ಸಂಘ ನಿಯಮಿತ ಚಿಟ್ಟಾ (ಕೆ) ತಾ: ಬಸವಕಲ್ಯಾಣ ಇದರ ನೊಂದಣಿ ಸಂಖ್ಯೆ: ಸನಿಜಿ1/ವಿ4/ನೊಂದಣಿ/33704/2003-04/ ದಿನಾಂಕ:31.03.2004ನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತುಹೋಗಿರುತ್ತವೆಂದು ಭಾವಿಸತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು. ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 1960ರ ನಿಯಮ 33 (ಎನ್) ರನ್ವಯ ಈ ಸಂಘದ ಎಲ್ಲಾ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಈ ಕಛೇರಿ ಮುದ್ರೆಯೊಂದಿಗೆ ದಿನಾಂಕ:31.12.2008ರಂದು ಈ ಆದೇಶವನ್ನು ಹೊರಡಿಸಲಾಗಿದೆ.

ಪಿ.ಆರ್.116 ಸಹಕಾರ ಸಂಘಗಳ ಉಪನಿಬಂಧಕರು, ಬೀದರ ಜಿಲ್ಲೆ, ಬೀದರ.

ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಕೇಂದ್ರ ಕಛೇರಿ, ಬೆಂಗಳೂರು ರವರ ನಡವಳಿಗಳು

ವಿಷಯ: ಸ್ಥಗಿತಗೊಂಡಿರುವ ಮೈಸೂರು ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿ., ಮೈಸೂರು ಇದರ ಸಮಾಪನೆಗೆ ಪ್ರಸ್ತಾವೆ ಸಲ್ಲಿಸುವ ಕುರಿತು.

ಉಲ್ಲೇಖ: 1) ಸ.ಸಂ.ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಇವರ ಕಛೇರಿ ಪತ್ರ ಸಂಖ್ಯೆ: ಜೆಆರ್ಎಂ /ಎಸ್/10 / ಎಲ್ಕ್ಯೂಡಿ/ಸಿಆರ್/7/2008-09, ದಿನಾಂಕ:26.08.2008.

ಪ್ರಸ್ತಾವನೆ:

ಮೈಸೂರು ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿ., ಮೈಸೂರು ಈ ಸಂಘವನ್ನು ನೊಂದಣಿ ಸಂಖ್ಯೆ: ಜೆಆರ್ಎಂ/ಎಡಿಎಂ/ಜಿ-2/ಆರ್‌ಜಿಎನ್/24336/1998-99, ದಿನಾಂಕ:29.08.1998ರನ್ವಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರಲ್ಲಿ ನೋಂದಣಿ ಆಗಿರುತ್ತದೆ. ಸಂಘದ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಸಂಘವು ತನ್ನ ಉದ್ದೇಶಿತ ಬೈಲಾ ಪ್ರಕಾರ ಒಕ್ಕೂಟದ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸದೆ ಸ್ಥಗಿತಗೊಂಡಿರುವುದರಿಂದ ಹಾಗೂ ಸಂಘದ ಆಡಳಿತ ಮಂಡಳಿ ಸದಸ್ಯರು ಸಂಘವನ್ನು ಮುನ್ನಡೆಸಿಕೊಂಡು ಹೋಗುವಲ್ಲಿ ಆಸಕ್ತಿಹೊಂದಿಲ್ಲದ ಕಾರಣ ಮತ್ತು ಸಂಘದಲ್ಲಿ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಇಲ್ಲದ ಕಾರಣ ಸಂಘದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾದ ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಇವರು ಸಮಾಪನೆಗೊಳಿಸಲು ಕೋರಿರುತ್ತಾರೆ. ಅದರಂತೆ ಸಂಘದ ಕಾರ್ಯಾಲಯವು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ಇದರ ಆಡಳಿತ ಕಛೇರಿಯಲ್ಲಿ ರೂ.500.00ಕ್ಕೆ ಮಾಹೆಯಾನ ಬಾಡಿಗೆ ರೂಪದಲ್ಲಿ ಒಂದು ಕೊಠಡಿಯನ್ನು ಪಡೆದಿದ್ದು, ಠೇವಣಿ ಮೇಲಿನ ಬಡ್ಡಿಯಿಂದ ಬರುವ ಹಣದಿಂದ ಕಛೇರಿ ಬಾಡಿಗೆ ಹಾಗೂ ನೌಕರರ ಸಂಬಳ ನೀಡುತ್ತಿದ್ದು, ಇದರಿಂದ ಸಂಘವು ನಷ್ಟವನ್ನು ಅನುಭವಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸಂಘವು ಪ್ರಾರಂಭದಲ್ಲಿ ಗೊಬ್ಬರ ವ್ಯಾಪಾರ ನಡೆಸುತ್ತಿದ್ದು, ನಂತರದ ದಿನಗಳಲ್ಲಿ ಯಾವುದೇ ಅಭಿವೃದ್ಧಿ ಪರ ಕೆಲಸ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆ. ಸದರಿ ಒಕ್ಕೂಟದಲ್ಲಿ 89 ವಿವಿಧ ಸಹಕಾರ ಸಂಸ್ಥೆಗಳು ಸದಸ್ಯರಾಗಿದ್ದು, ಸದರಿ ಸಂಸ್ಥೆಗಳಿಂದ ರೂ.10,50,000/-ಗಳ ಷೇರು ಸಂಗ್ರಹಿಸಿದ್ದು, ಇದೇ ಮೊತ್ತದಲ್ಲಿ ಕಛೇರಿ ಮುಂಗಡ ರೂ.2,50,000/- ಗಳನ್ನು ಪಾವತಿಸಿದ್ದು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮೈಸೂರು ಇಲ್ಲಿ ರೂ.4,59,000/- ಗಳನ್ನು ನಿಖರ ಠೇವಣಿ ಮಾಡಿರುವುದಾಗಿ ತಿಳಿಸಿರುತ್ತಾರೆ ಹಾಗೂ ಫ್ಯಾಕ್ಸ್ ಬೆಂಗಳೂರು ಇಲ್ಲಿ ರೂ.1,03,000/-ಗಳನ್ನು ಠೇವಣಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಒಕ್ಕೂಟದ ಲೆಕ್ಕ ಪರಿಶೋಧನೆಯು 2004-05ನೇ ಸಾಲಿನವರೆಗೆ ಆಗಿದ್ದು, ನಂತರದ ವರ್ಷಗಳ ಲೆಕ್ಕಪರಿಶೋಧನೆಗೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಹೀಗೆ ಸಂಸ್ಥೆಯು ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳದೆ ಆಡಳಿತ ಮಂಡಳಿ ಸದಸ್ಯರು ಸಕ್ರಿಯವಾಗಿ ಸಂಘದ ಕೆಲಸ ಕಾರ್ಯದಲ್ಲಿ ಪಾಲ್ಗೊಳ್ಳದೆ ನಿಷ್ಕ್ರಿಯಗೊಂಡಿದ್ದು, ಒಕ್ಕೂಟವನ್ನು ಯಥಾ ಸ್ಥಿತಿಯಲ್ಲೇ ಮುಂದುವರೆಸಿದಲ್ಲಿ ಪ್ರತಿ ವರ್ಷ ನಷ್ಟದ ಪ್ರಮಾಣ ಜಾಸ್ತಿಯಾಗಿ ಸದಸ್ಯ ಸಹಕಾರ ಸಂಘಗಳ ಷೇರು ಮೊತ್ತಕ್ಕೆ ತುತ್ತಾಗುವ ಸಂಭವವಿರುವುದಾಗಿ ತಿಳಿಸಿರುತ್ತಾರೆ.

ಸದರಿ ಒಕ್ಕೂಟದಲ್ಲಿ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಇರುವುದಿಲ್ಲವಾದ್ದರಿಂದ ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಬಿ) ರನ್ವಯ ಸಮಾಪನೆಗೊಳಿಸಿ, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸುವಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರು ಶಿಫಾರಸ್ಸು ಮಾಡಿರುತ್ತಾರೆ.

ಅದರಂತೆ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರಂತೆ ಸಮಾಪನೆಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಗಿನ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/43/2007-08, ದಿನಾಂಕ:28ನೇ ಜನವರಿ, 2009

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹೆಚ್.ಡಿ.ರಮೇಶ್, ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಆದ ನಾನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/2001, ದಿನಾಂಕ:21.11.2001 ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರನ್ವಯ ದತ್ತವಾಗಿರುವ ಅಧಿಕಾರದನ್ವಯ ಮೈಸೂರು ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರಾಟ ಒಕ್ಕೂಟ ನಿ., ಮೈಸೂರು ಈ ಸಂಘವನ್ನು ಸಮಾಪನೆಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 73(1)ರನ್ವಯ ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು 15 ದಿನಗಳೊಳಗಾಗಿ ಪಡೆದುಕೊಂಡು ಪ್ರಭಾರ ಪಟ್ಟಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಸಂಘದ ಅಥಾವೆ ಪತ್ರದ ಆಧಾರದ ಮೇಲೆ ಆದ್ಯತಾ ಪಟ್ಟಿ ತಯಾರಿಸಿ ಈ ಕಛೇರಿಯಿಂದ ಅನುಮತಿ ಪಡೆದು ಆಸ್ತಿಯು ವಸೂಲಾದಂತೆ ಆದ್ಯತೆ ಮೇಲೆ ಜವಾಬ್ದಾರಿ ತೀರುವಳಿ ಮಾಡಿ ಸಂಘದ ನೋಂದಣಿ ರದ್ಧತಿಯ ಪ್ರಸ್ತಾವನೆ ಜರೂರು ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:28.01.2009 ರಂದು ಹೊರಡಿಸಲಾಗಿದೆ.

ಪಿ.ಆರ್.121 ಸಹಕಾರ ಸಂಘಗಳ ಅಪರ ನಿಬಂಧಕರು, (ಕೈಗಾರಿಕೆ ಮತ್ತು ಇತರೆ)

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರು ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಕೇಂದ್ರ ಕಛೇರಿ, ಬೆಂಗಳೂರು ರವರ ನಡವಳಿಗಳು

ವಿಷಯ: ಸ್ಥಗಿತಗೊಂಡಿರುವ ನ್ಯಾಯಾಂಗ ಇಲಾಖಾ ನೌಕರರ ಸಹಕಾರ ಸಂಘ (ನಿ) ಮಂಡ್ಯ ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ರ ಮೇರೆಗೆ ಸಮಾಪನೆಗೊಳಿಸಲು ಪ್ರಸ್ತಾವೆ ಸಲ್ಲಿಸುವ ಕುರಿತು.

ಉಲ್ಲೇಖ: 1) ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ ಮೈಸೂರು, ಇವರ ಪತ್ರ ಸಂಖ್ಯೆ: JRM.S-10/LQD/CR/32/2007-08, ದಿನಾಂಕ:16.10.2007.

ಪ್ರಸ್ತಾವನೆ:

ನ್ಯಾಯಾಂಗ ಇಲಾಖಾ ನೌಕರರ ಸಹಕಾರ ಸಂಘ(ನಿ) ಮಂಡ್ಯ, ಈ ಸಂಘವು ನೋಂದಣಿ ಸಂಖ್ಯೆ:9048/ ದಿನಾಂಕ:04.08.1982ರಲ್ಲಿ ನೋಂದಣಿಯಾಗಿರುತ್ತದೆ. ಇದರ ಕಾರ್ಯವ್ಯಾಪ್ತಿಯು ಮಂಡ್ಯ ಜಿಲ್ಲಾದ್ದಾಗಿರುತ್ತದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರ ವರದಿಯಂತೆ ಸಂಘವು ತನ್ನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಹೋಗುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಸಂಘವನ್ನು ಪುನರುಜ್ಜೀವನಗೊಳಿಸಿಕೊಂಡು ಮುನ್ನಡೆಸಿಕೊಂಡು ಹೋಗುವ ಬಗ್ಗೆ ಸಂಘದ ಸದಸ್ಯರು ಆಸಕ್ತಿ ವಹಿಸದ ಕಾರಣ ಸಾರ್ವಜನಿಕ ಪ್ರಕಟಣೆ ಹೊರಡಿಸಿ ಸಂಘವನ್ನು ಸಮಾಪನೆಗೊಳಿಸುವುದರ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸುವಂತೆ ಪ್ರಕಟಣೆಯಲ್ಲಿ ಸೂಚಿಸಿದ್ದು, ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದ ಕಾರಣ ಸಂಘದ ಅಸ್ತಿತ್ವದಿಂದ ಸಂಘದ ಸದಸ್ಯರಿಗೆ ಯಾವುದೇ ಪ್ರಯೋಜನವೂ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಈ ಸಂಘವನ್ನು ಪುನಶ್ಚೇತನಗೊಳಿಸಲು ಯಾವುದೇ ಸಾಧ್ಯತೆಗಳು ಇಲ್ಲದೇ ಇರುವುದರಿಂದ ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ರನ್ವಯ ಸಮಾಪನೆಗೊಳಿಸಲು ಸಹಕಾರ ಸಂಘಗಳ ಜಂಟಿ

ನಿಬಂಧಕರು, ಮೈಸೂರು ಪ್ರಾಂತ ಮೈಸೂರು ಇವರು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರಂತೆ ಸಮಾಪನೆಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಗಿನ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/43/2007-08, ದಿನಾಂಕ:28ನೇ ಜನವರಿ, 2009

ಪ್ರಸ್ತಾವೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹೆಚ್.ಡಿ.ರಮೇಶ್, ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಆದ ನಾನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/2001, ದಿನಾಂಕ:21.11.2001 ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರನ್ವಯ ದತ್ತವಾಗಿರುವ ಅಧಿಕಾರದನ್ವಯ ನ್ಯಾಯಾಂಗ ಇಲಾಖಾ ನೌಕರರ ಸಹಕಾರ ಸಂಘ (ನಿ) ಮಂಡ್ಯ, ಈ ಸಂಘವನ್ನು ಸಮಾಪನೆಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 73(1)ರನ್ವಯ ಸಹಕಾರ ಸಂಘಗಳ ಸಹಾಯಕನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು 15 ದಿನಗಳೊಳಗಾಗಿ ಪಡೆದುಕೊಂಡು ಪ್ರಭಾರ ಪಟ್ಟಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಸಂಘದ ಅಥಾವೆ ಪತ್ರದ ಆಧಾರದ ಮೇಲೆ ಆದ್ಯತಾ ಪಟ್ಟಿ ತಯಾರಿಸಿ ಈ ಕಛೇರಿಯಿಂದ ಅನುಮತಿ ಪಡೆದು ಆಸ್ತಿಯು ವಸೂಲಾದಂತೆ ಆದ್ಯತೆ ಮೇಲೆ ಜವಾಬ್ದಾರಿ ತೀರುವಳಿ ಮಾಡಿ ಸಂಘದ ನೋಂದಣಿ ರದ್ಧತಿಯ ಪ್ರಸ್ತಾವನೆ ಜರೂರು ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:28.01.2009 ರಂದು ಹೊರಡಿಸಲಾಗಿದೆ.

ಪಿ.ಆರ್.122 ಸಹಕಾರ ಸಂಘಗಳ ಅಪರ ನಿಬಂಧಕರು, (ಕೈಗಾರಿಕೆ ಮತ್ತು ಇತರೆ)

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಸಂಕ್ಲೀಪುರ ಭೂ ಅಭಿವೃದ್ಧಿ ಸಹಕಾರ ಸಂಘ ನಿ., ಸಂಕ್ಲೀಪುರ, ಹರಿಹರ-ತಾ: ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಸಮಸಂಖ್ಯೆ ಆದೇಶ ದಿನಾಂಕ:08.08.2006.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ರವರು ಸಲ್ಲಿಸಿರುವ ಪ್ರಸ್ತಾವೆ ದಿನಾಂಕ:09.01.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಎಆರ್-31/ಆರ್‌ಜಿಎನ್/ಎಂಕೆಟಿ/21045/1994-95, ದಿನಾಂಕ:24.11.1994 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ಧುಗೊಳಿಸಲು ಉಲ್ಲೇಖ (2)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ:ಎಲ್‌ಕ್ಯೂಡಿ:ಸಿಆರ್-12:2002-03, ದಿನಾಂಕ:27ನೇ ಜನವರಿ, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ, ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಸಂಕ್ಲೀಪುರ ಭೂ ಅಭಿವೃದ್ಧಿ ಸಹಕಾರ ಸಂಘ ನಿ., ಸಂಕ್ಲೀಪುರ, ಹರಿಹರ-ತಾ: ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತುಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ

ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ, ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:27.01.2009 ರಂದು ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.123

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ನಂ.ಡಿ.ಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-13/2008-09, ದಿನಾಂಕ:24ನೇ ಫೆಬ್ರವರಿ, 2009

ವಿಷಯ: ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಮಿಟ್ಲಕಟ್ಟೆ, ಹರಿಹರ-ತಾಲ್ಲೂಕು ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73 ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಪತ್ರ ದಿನಾಂಕ:25.10.2008.

2) ವ್ಯವಸ್ಥಾಪಕ ನಿರ್ದೇಶಕರು, ಶಿಮೂಲ, ಶಿವಮೊಗ್ಗರವರ ಪತ್ರ ದಿನಾಂಕ:05.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ, ಇವರು ಉಲ್ಲೇಖ (1)ರಲ್ಲಿ ಕಾಣಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ. ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ, ಉಲ್ಲೇಖ (2)ರ ಪತ್ರದ ರೀತ್ಯಾ ವ್ಯವಸ್ಥಾಪಕ ನಿರ್ದೇಶಕರು, ಶಿಮೂಲ್ ಇವರೂ ಕೂಡ ಮೇಲ್ಕಂಡ ಸಂಘವನ್ನು ಸಮಾಪನೆಗೊಳಿಸಲು ಕೋರಿರುತ್ತಾರೆ. ಆದ ಕಾರಣ ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ. ಸಂಘವನ್ನು ಇದೇ ರೀತಿ ಮುಂದುವರೆಯಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ಬಿ. ಕುಬೇರಪ್ಪ ಕೆ.ಸಿ.ಎಸ್. ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಆದ ನಾನು ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಹಾಲು ಉತ್ಪಾದಕರ ಸಹಕಾರ ಸಂಘ ನಿ., ಮಿಟ್ಲಕಟ್ಟೆ, ಹರಿಹರ-ತಾಲ್ಲೂಕು ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ **ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ,** ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:24.02.2009 ರಂದು ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.200

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ನೀರಾ, ಪಾನ, ಬೆಲ್ಲ, ಸಹಕಾರ ಸಂಘ ನಿ., ದಾವಣಗೆರೆ, ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ಸಮಾಪನೆ/ಸಿಆರ್-43/2006-07, ದಿನಾಂಕ:14.03.2007.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರ ಪತ್ರ ದಿನಾಂಕ:06.02.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಎಆರ್‌ಸಿ/720/ ದಿನಾಂಕ:01.12.1935 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:14.03.2007ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಉಲ್ಲೇಖ (2)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ:ಡಿ.ಆರ್/ಡಿವಿಜಿ/ನೋಸಂರ/ಸಿಆರ್-43/2006-07, ದಿನಾಂಕ:20ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ನೀರಾ, ಪಾನ, ಬೆಲ್ಲ, ಸಹಕಾರ ಸಂಘಗಳ ನಿ., ದಾವಣಗೆರೆ ಇದರ ನೋಂದಣಿಯನ್ನು ರದ್ಧುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತುಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.02.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಪಿ.ಆರ್.201 ದಾವಣಗೆರೆ ಜಿಲ್ಲೆ, ದಾವಣಗೆರೆ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಸ್ವಾಮಿ ವಿವೇಕಾನಂದ ವಿದ್ಯಾರ್ಥಿ ಬಳಕೆದಾರರ ಸಹಕಾರ ಸಂಘ ನಿ., ದಾವಣಗೆರೆ, ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ಸಮಾಪನೆ/ಸಿಆರ್-51/2006-07, ದಿನಾಂಕ:14.03.2007.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರ ಪತ್ರ ದಿನಾಂಕ:06.02.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಸನಿ-31/ಸಿಆರ್-69/18663/93-94, ದಿನಾಂಕ:15.01.1994 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:14.03.2007ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಉಲ್ಲೇಖ (2)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ:ಡಿ.ಆರ್/ಡಿವಿಜಿ/ನೋಸಂರ/ಸಿಆರ್-51/2006-07, ದಿನಾಂಕ:20ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ

ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಸ್ವಾಮಿ ವಿವೇಕಾನಂದ ವಿದ್ಯಾರ್ಥಿ ಬಳಕೆದಾರರ ಸಹಕಾರ ಸಹಕಾರ ಸಂಘಗಳ ನಿ., ದಾವಣಗೆರೆ ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತುಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.02.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಪಿ.ಆರ್.202 ದಾವಣಗೆರೆ ಜಿಲ್ಲೆ, ದಾವಣಗೆರೆ.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ
ಡಿಟಿಸಿಆರ್/36/2007-08, ದಿನಾಂಕ:24ನೇ ಫೆಬ್ರವರಿ, 2009

ಅಬಕಾರಿ ಉಪನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು ಇವರ ಪ್ರ.ಮಾ.ವ.ಸಂ: 07/2007-08, ದಿನಾಂಕ:17.08.2007

ಫಿರ್ಯಾದುದಾರರು	ಆರೋಪಿ
ಅಬಕಾರಿ ಉಪನಿರೀಕ್ಷಕರು (ಜಾ ಮತ್ತು ತ) ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಮಂಡ್ಯ.	ತಲೆತಪ್ಪಿಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:17.08.2007ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕು, ಮೈಸೂರು-ಬೆಂಗಳೂರು ರಸ್ತೆಯ ರುದ್ರಾಕ್ಷಿಪುರ ಗೇಟ್‌ನಿಂದ ಕೆ.ಕೋಡಿಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಕ್ರಾಸ್ ಬಳಿ ಅಕ್ರಮವಾಗಿ ಟಿ.ವಿ.ಎಸ್. ಸ್ಪೋರ್ಟ್ಸ್ ಮೊಪೆಡ್ ನೋಂದಣಿ ಸಂಖ್ಯೆ: ಕೆಎ-05-/ಇಇ-2044 ವಾಹನದಲ್ಲಿ 8.640 ಲೀ ತೆರಿಗೆ ರಹಿತ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಫಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11 ಮತ್ತು 14ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 34, 38(ಎ) ಮತ್ತು 43(ಎ) ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ. ಸಂಖ್ಯೆ: 07/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡುಬಂದಿದ್ದು ಅವು ಭಾರತದ ಮಾನಕ ಬ್ಯೂರೋಗೆ ಅನುಗುಣವಾಗಿರುವುದಿಲ್ಲ ಮತ್ತು ನಕಲಿ ಮದ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:09.11.2007ರ ಪತ್ರದ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಗಳನ್ನು ಕೈಗೊಂಡಿದ್ದು, ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:13.11.2007ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ದಕ್ಷಿಣ) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಕೆಎ-05-ಇಇ-2044ಗೆ ಸಂಬಂಧಿಸಿದಂತೆ ಶ್ರೀ ಆನಂದ್‌ರಾಜ್ ಜಿ. ಬಿನ್ ಗೋಪಾಲ್‌ರಾಜ್, ಬಿಡಬ್ಲ್ಯೂಎಸ್‌ಎಸ್‌ಬಿ ರೋಡ್, ರಂಗನಾಥ ಎಕ್ಸ್‌ಟೆನ್ಷನ್, ಮುನಿಸಿಪಲ್ ಹೈಸ್ಕೂಲ್ ಹತ್ತಿರ, ಕನಕಪುರ ಟೌನ್, ಬೆಂಗಳೂರು ಜಿಲ್ಲೆ ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:19.12.2007ರಂದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರನ್ವಯ ಕಾರಣ ಕೇಳುವ ನೋಟೀಸ್ ನೀಡಲಾಗಿತ್ತು.

ವಾಹನದ ಮಾಲೀಕರು ದಿನಾಂಕ:07.01.2008ರ ಪತ್ರದಲ್ಲಿ ವಾಹನವನ್ನು ಬೇರೊಬ್ಬರಿಗೆ ಮಾರಾಟ ಮಾಡಿದ್ದು, ತನಗೂ ಹಾಗೂ ವಾಹನಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ತಕರಾರು ಏನು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಿ.ವಿ.ಎಸ್. ಸ್ಪೋರ್ಟ್ಸ್ ಮೊಪೆಡ್ ನೋಂದಣಿ ಸಂಖ್ಯೆ: ಕೆಎ-05-/ಇಇ-2044 ವಾಹನದಲ್ಲಿ ದಿನಾಂಕ:17.08.2007ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು

ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತುಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಹಾಗೂ ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಅದರ ಬಿಡಿ ಭಾಗಗಳು ತುಕ್ಕು ಹಿಡಿದು ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/36/2007-08, ದಿನಾಂಕ:24ನೇ ಫೆಬ್ರವರಿ, 2009

ಡಾ: ವೈ. ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ: 07/2007-08, ದಿನಾಂಕ:17.08.2007ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಿ.ವಿ.ಎಸ್. ಸ್ಪೋರ್ಟ್ಸ್ ಮೊಪೆಡ್ ನೊಂದಣಿ ಸಂಖ್ಯೆ: ಕೆಎ-05-/ಇಇ-2044 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:24.02.2009ರಂದು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಬೆರಳಚ್ಚು ಮಾಡಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪಿ.ಆರ್.212

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ ಡಿಟಿಸಿಆರ್/58/2007-08, ದಿನಾಂಕ:24ನೇ ಫೆಬ್ರವರಿ, 2009

ಅಬಕಾರಿ ಉಪನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು ಇವರ ಪ್ರ.ಮಾ.ವ.ಸಂ: 10/2007-08, ದಿನಾಂಕ:03.10.2007

ಫಿರ್ಯಾದುದಾರರು	**ಆರೋಪಿ**
ಅಬಕಾರಿ ಉಪನಿರೀಕ್ಷಕರು (ಜಾ ಮತ್ತು ತ) ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಮಂಡ್ಯ.	ತಲೆತಪ್ಪಿಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:03.10.2007ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ನಂಬಿನಾಯಕನಹಳ್ಳಿ ಗ್ರಾಮದ ಬಸ್ ನಿಲ್ದಾಣದ ಸಮೀಪವಿರುವ ಪಾಳು ಜಾಗದಲ್ಲಿ ಅಕ್ರಮವಾಗಿ 190.080 ಲೀ. ನಕಲಿ ಮದ್ಯವನ್ನು ವಾಹನ ಬಜಾಜ್ ಲಗೇಜ್ ಆಟೋ ಸಂಖ್ಯೆ: ಸಿಎಎ-3940 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಫಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 13 ಎಫ್ ಮತ್ತು 14ರ ರೀತ್ಯಾ ಅಪರಾಧವಾಗಿದ್ದು, ಇದೇ ಕಾಯ್ದೆಯ ಕಲಂ 32, 38(ಎ) ಮತ್ತು 43 ರೀತ್ಯಾ ಶಿಕ್ಷಾರ್ಹವಾದ್ದರಿಂದ ವಾಹನ ಹಾಗೂ ಮದ್ಯವನ್ನು ಪಂಚನಾಮೆಯಲ್ಲಿ ಅಮಾನತ್ತು ಪಡಿಸಿಕೊಂಡು ಈ ಬಗ್ಗೆ ಪ್ರ.ಮಾ.ವ. ಸಂಖ್ಯೆ: 10/2007-08 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ಮದ್ಯದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಅದರ ಪ್ರಕಾರ ಮಾದರಿ ಬಾಟಲುಗಳಲ್ಲಿ ಈಥೈಲ್ ಆಲ್ಕೋಹಾಲ್ ಕಂಡುಬಂದಿದ್ದು ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆ ಎಂದು ರಸಾಯನ ತಜ್ಞರ ವರದಿಯಿಂದ ದೃಢಪಟ್ಟಿರುವುದರಿಂದ, ವಾಹನ ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:12.11.2007 ಮತ್ತು 18.08.2008ರ ಪತ್ರದ ಮೂಲಕ ಕೋರಿರುತ್ತಾರೆ.

ಅದರಂತೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಗಳನ್ನು ಕೈಗೊಂಡಿದ್ದು, ಮದ್ಯವನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:13.11.2007ರಂದು ಸರ್ಕಾರಕ್ಕೆ ಈಗಾಗಲೇ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಾಹನಕ್ಕೆ ಸಂಬಂಧಪಟ್ಟಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಪಶ್ಚಿಮ) ಇವರು ನೀಡಿರುವ "ಬಿ" ವಹಿಯಲ್ಲಿ ವಾಹನ ಸಂಖ್ಯೆ: ಸಿಎಎ-3940 ಗೆ ಸಂಬಂಧಿಸಿದಂತೆ ಶ್ರೀ ಅಸ್ಲಮ್ ಖಾನ್ ಬಿನ್ ಅಹಮದ್ ಖಾನ್, ನಂ.1, 1ನೇ ಕ್ರಾಸ್, ಒಟಿಸಿ ರಸ್ತೆ, ಬೆಂಗಳೂರು-53, ಇವರು ವಾಹನದ ಮಾಲೀಕರೆಂದು ತಿಳಿಸಿದ್ದು, ಸದರಿಯವರಿಗೆ ದಿನಾಂಕ:27.09.2008ರಂದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರನ್ವಯ ಕಾರಣ ಕೇಳುವ ನೋಟೀಸ್ ನೀಡಲಾಗಿತ್ತು.

ಕಾರಣ ಕೇಳುವ ನೋಟಿಸ್ ವಾಹನದ ಮಾಲೀಕರು ಮೇಲ್ಕಂಡ ವಿಳಾಸದಲ್ಲಿ ಲಭ್ಯವಿರದ ಕಾರಣ ಹಿಂತಿರುಗಿ ಬಂದಿರುತ್ತದೆ. ಇದುವರೆವಿಗೂ ವಾಹನದ ಬಿಡುಗಡೆಗೆ ಕೋರಿ ಯಾರು ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಲಗೇಜ್ ಆಟೋ ಸಂಖ್ಯೆ: ಸಿಎಎ-3940 ವಾಹನದಲ್ಲಿ ದಿನಾಂಕ:03.10.2007ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತುಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಹಾಗೂ ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಅದರ ಬಿಡಿ ಭಾಗಗಳು ತುಕ್ಕು ಹಿಡಿದು ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/58/2007-08, ದಿನಾಂಕ:24ನೇ ಫೆಬ್ರವರಿ, 2009

ಡಾ: ವೈ. ಮಂಜುನಾಥ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಮದ್ದೂರು ತಾಲ್ಲೂಕು ಇವರ ಪ್ರ.ಮಾ.ವ ಸಂಖ್ಯೆ: 10/2007-08, ದಿನಾಂಕ:03.10.2007ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಬಜಾಜ್ ಲಗೇಜ್ ಆಟೋ ಸಂಖ್ಯೆ: ಸಿಎಎ-3940 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

1	ಸಾಮಾಜಿಕ ಅರಣ್ಯ ವಿಭಾಗ, ತುಮಕೂರು	ಎ1:ಬಿಯುಡಿ: ಟೆಂಡರ್:ಎವ:9/08–09, ದಿನಾಂಕ:09–07–2009 ಗ್ರೀನಿಂಗ್ ಇಂಡಿಯಾ ಯೋಜನೆ	ತುಮಕೂರು	1. **GREEN HOUSE WITH FOGGING SYSTEM AT Chikkonahalli Departmental Nursery in Tumkur Taluk** 5mt depth x 4mt width x 2.75 height semicircular structure having 6 Nos. Main structure of GI. 'B' class tube is embedded in the foundation of 400 mm depth in a plain surface. All round the structure between the foundation the brick work of 300 mm height and 150 thick duly plastered. In front end view there will be a PVC door to lockable type and one 450mm dia exhaust slow speed laminar flow aerofoiled bladed exhaust blower will be provided which will be connected to the pad pump circuit to cut off and on depending upon the set point condition. The single phase power should be used for continuous non interrupted power. The eco cooled cell deck pad of 4 x 0.10 mt will be housed in a GI tray with water spray PVC lateral pipe line is fixed on the other side of the structure (opposite to door side) which is connected to the exhaust fan circuitary. The system is close circuit for water flow.	1 ನಂ	300000.00	7500.00	ಅರ್ಜಿಯನ್ನು ನಿಗದಿ ಪಡಿಸಿರುವುದಿಲ್ಲ	29/07/09 ರಂದು 12.00 ಗಂಟೆಯವರೆಗೆ	29/07/09 ರಂದು 3.00 ಗಂಟೆಯವರೆಗೆ	ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು	3 ತಿಂಗಳು
				2. Construction of Shade house	1.ನಂ	150000.00	3750.00					3 ತಿಂಗಳು
				3. Supply of 150cc router trainer with stand	1 ನಂ.	350000.00	8750.00					3 ತಿಂಗಳು
				4. Construction of SSM Gate pillers and MS gate of 12" x 10" size with Barbed wire fencing around and pipeline system, etc.,	1 ನಂ	200000.00	5000.00					3 ತಿಂಗಳು

ದಿನಾಂಕ:29-07-2009 ರಂದು ನಡೆಸುವ ಟೆಂಡರ್‌ನಲ್ಲಿ ಯಾರು ಭಾಗವಹಿಸದೇ ಇದ್ದಲ್ಲಿ ಅಥವಾ ಟೆಂಡರ್‌ನ್ನು ಸಂಪೂರ್ಣವಾಗಿ ತಿರಸ್ಕರಿಸಿದಲ್ಲಿ ಮರು ಟೆಂಡರ್‌ನ್ನು ದಿನಾಂಕ:05-08-2009 ರಂದು ನಡೆಸಲಾಗುವುದು. ಈ ರೀತಿಯ ಮರುಟೆಂಡರ್‌ಗೆ ಪುನಃ ಯಾವುದೇ ಪ್ರಕಟಣೆ ನೀಡಲಾಗುವುದಿಲ್ಲ. **ಹೆಚ್ಚಿನ ಮಾಹಿತಿಗಾಗಿ ಕೆಲಸದ ದಿನ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು ರವರನ್ನು ಕಛೇರಿಯಲ್ಲಿ ಸಂಪರ್ಕಿಸುವುದು.**

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು.

ನಿಬಂಧನೆಗಳು

1. ಅ) ಟೆಂಡರ್ ಫಾರಂನ್ನು ಟೆಂಡರ್ ದಿನಾಂಕದಂದು ಅಪರಾಹ್ನ 12.00 ಗಂಟೆಯವರೆಗೆ ರೂ. 200-00 ಮತ್ತು ತೆರಿಗೆ ಪಾವತಿ ಮಾಡಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ್ ಫಾರಂನ್ನು ಸಂಬಂಧಪಟ್ಟ ಕಾಮಗಾರಿಯನ್ನು ನಮೂದಿಸಿ ಈ ಕಛೇರಿಯಲ್ಲಿ ಇಟ್ಟಿರುವ ಮೊಹರಾದ ಪೆಟ್ಟಿಗೆಯಲ್ಲಿ ಮಧ್ಯಾಹ್ನ 3.00 ಗಂಟೆಯವರೆಗೆ ಹಾಕಬಹುದಾಗಿದೆ.
   ಆ) ಟೆಂಡರ್ ಫಾರಂನ್ನು ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಉಪಯೋಗಿಸುವುದು.
2. ಸ್ವೀಕರಿಸಲಾದ ಟೆಂಡರುಗಳನ್ನು ಆಯಾ ದಿನಾಂಕಗಳಂದು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರು ಅಥವಾ ಅವರಿಂದ ನೇಮಿಸಲ್ಪಟ್ಟವರಿಂದ ಅಪರಾಹ್ನ 4:00 ಗಂಟೆಗೆ ಹಾಜರಿರುವ ಅರಣ್ಯ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
3. ಪ್ರತಿ ಟೆಂಡರ್‌ದಾರರು ಕಾಮಗಾರಿಗಳನ್ನು ನಿರ್ವಹಿಸಲು ಆಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವಾಹನಗಳನ್ನು ಸ್ವಂತವಾಗಿ ಮಾಡಿಕೊಳ್ಳಬೇಕು.
4. ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವವರು ಆಯಾ ಕೆಲಸಕ್ಕೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು ಇವರ ಹೆಸರಿಗೆ ಯಾವುದಾದರೂ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ ರೂಪದಲ್ಲಿ ಪಾವತಿಸಬೇಕು.
5. ಗುತ್ತಿಗೆದಾರರು ಸಲ್ಲಿಸುವ ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು ಇವರು ಕಾಯ್ದಿರಿಸಿಕೊಂಡಿದ್ದಾರೆ.
7. ಪೂರ್ಣಗೊಂಡ ಕಾಮಗಾರಿಗಳಿಗೆ ಸರ್ಕಾರದಿಂದ ಅನುದಾನವು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು ರವರ ಕಛೇರಿಗೆ ತಲುಪಿದ ನಂತರವೇ ಪಾವತಿ ಮಾಡಲಾಗುವುದು.
8. ಈ ಮೇಲಿನ ಕಾಮಗಾರಿಗಳ ಹಣ ಪಾವತಿಸುವುದು ಆಯಾ ಯೋಜನೆಗಳಡಿ ಬಿಡುಗಡೆಗೊಳ್ಳುವ ಅನುದಾನ ಮತ್ತು ಅನುಮೋದನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ಪಕ್ಷದಲ್ಲಿ ಸರ್ಕಾರದಿಂದ ಹಣ ಬಿಡುಗಡೆಯಾಗುವುದು ತಡವಾದ ಪಕ್ಷದಲ್ಲಿ ಇಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.
9. ಈ ಅರಣ್ಯ ಕಾಮಗಾರಿಗಳು ಕಾಲಬದ್ಧ ಕಾಮಗಾರಿಗಳಾಗಿದ್ದು, ಅವುಗಳನ್ನು ಕಾಲಮಿತಿ ಮತ್ತು ನಿಗಧಿತ ಸಮಯಗಳಲ್ಲಿ ಪೂರ್ಣಗೊಳಿಸಬೇಕು ಇಲ್ಲವಾದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಕಾಮಗಾರಿಗಳನ್ನು ಇಲಾಖೆ ಮೂಲಕ ನಿರ್ವಹಿಸಲಾಗುವುದು ಹಾಗೂ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇಲಾಖಾ ಮೂಲಕ ವೆಚ್ಚವಾದರೆ ಅದನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲಾಗುವುದು.
10. ವಿಜೇತ ಟೆಂಡರ್‌ದಾರರು ಆದೇಶದ 7 ದಿನಗಳೊಳಗಾಗಿ ಕರಾರನ್ನು ಚಾಲ್ತಿ ದರ ಛಾಪಾ ಕಾಗದದ ಮೇಲೆ ತುಮಕೂರು ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಮಕ್ಷಮದಲ್ಲಿ ಮಾಡಿಕೊಳ್ಳತಕ್ಕದ್ದು.

11. ಕೆಲಸಗಳನ್ನು ಆಯಾಯ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಪರಿಶೀಲನೆ ಹಾಗೂ ದೃಢೀಕರಣವನ್ನು ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು ಹಾಗೂ ಪಾವತಿಸುವ ಶೇ.2 ರಷ್ಟು ಹಣವನ್ನು ಆದಾಯ ತೆರಿಗೆ ಬಾಬ್ತು ಹಿಡಿಯಲಾಗುವುದು ಮತ್ತು 2.5 ರಷ್ಟು ಭದ್ರತಾ ಠೇವಣಿ ಹಿಡಿಯಲಾಗುವುದು. ಕಾಲಬದ್ಧ ಕೆಲಸಗಳ ಬಾಬ್ತು ಸರ್ಕಾರವು ನಿಗದಿಪಡಿಸಿದ ಇತರೆ ತೆರಿಗೆಗಳನ್ನು ಸಂಬಂಧಪಟ್ಟ ಬಿಲ್ಲುಗಳಲ್ಲಿ ಕಟಾಯಿಸಲಾಗುವುದು.
12. ಯಾವುದೇ ತಕರಾರಿನ ಬಗ್ಗೆ ತುಮಕೂರು ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.
13. ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿಯಿಲ್ಲವಾದರೆ ಹಾಸನ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದದ್ದು.
14. ಕೆಲಸದ ಪರಿಮಾಣ ಹೆಚ್ಚುವರಿ ಅಥವಾ ಕಡಿಮೆಯಾಗುವ ಸಾಧ್ಯತೆಯಿದ್ದು, ಹೆಚ್ಚುವರಿಯಾದ ಕೆಲಸವನ್ನು ಹಾಗೂ ಇತರೆ ಕಾಮಗಾರಿಗಳನ್ನು ಸಹ. ಒಪ್ಪಿಗೆಯಾದ ಟೆಂಡರಿನ ದರದಲ್ಲಿ ಆಯಾ ವಲಯ ಅರಣ್ಯಾಧಿಕಾರಿಗಳು ಸೂಚಿಸುವ ಜಾಗದಲ್ಲಿಯೇ ಮಾಡತಕ್ಕದ್ದು.
15. ಕರ್ನಾಟಕ ಅರಣ್ಯ ಕಾಯ್ದೆ ಕರ್ನಾಟಕ ಅರಣ್ಯ ಸಂಹಿತೆ. ಕರ್ನಾಟಕ ಅರಣ್ಯ ಮ್ಯಾನ್ಯುಯಲ್ ಹಾಗೂ ಕರ್ನಾಟಕ ಪಾರದರ್ಶಕ ಕಾಯ್ದೆ ಸರ್ಕಾರಿ ಅಧಿಸೂಚನೆ : ಆದೇಶಗಳು ಮತ್ತು ಕಾಲಕಾಲಕ್ಕೆ ಇಲಾಖೆಯಿಂದ ನೀಡಿದ ಸುತ್ತೋಲೆ ಮೇಲೆ ನಿರ್ದೇಶನ ಪ್ರಕಾರ ಅರಣ್ಯ ಗುತ್ತಿಗೆದಾರರು ಹಾಗೂ ಒಟ್ಟಾಗಿ ಕಾಮಗಾರಿಗಳನ್ನು ನಿರ್ವಹಿಸುವುದು.
16. ಟೆಂಡರಿನಲ್ಲಿ ಭಾಗವಹಿಸುವ ಗುತ್ತಿಗೆದಾರರು ತುಮಕೂರು ಸಾಮಾಜಿಕ ಅರಣ್ಯ ವಿಭಾಗದಲ್ಲಿ 2009–10ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿಕೊಂಡಿರಬೇಕು.
17. ಟೆಂಡರ್‌ನ್ನು ಸಲ್ಲಿಸುವ ಅರಣ್ಯ ಗುತ್ತಿಗೆದಾರರು ಮೇಲ್ಕಾಣಿಸಿದ ಕಾಮಗಾರಿಗಳನ್ನು ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ಸ್ಪಷ್ಟ ಪುರಾವೆ/ದಾಖಲೆಗಳನ್ನು ಈ ಕೆಳಸಹಿದಾರರಿಗೆ ತೃಪ್ತಿಕರವಾಗುವಂತೆ ಒದಗಿಸಬೇಕು.
18. ಅಂದಾಜು ಮೊತ್ತವು ಮಂಜೂರಾಗುವ ಅಂದಾಜು ಪಟ್ಟಿಯನ್ನು ಅವಲಂಬಿಸಿರುತ್ತದೆ.
19. ಟೆಂಡರು ಪ್ರಕಟಣೆಯಲ್ಲಿ ನಮೂದಿಸಿದ ಕಾಮಗಾರಿಗಳನ್ನು ವಿವಿಧ ಕಾರಣಗಳಿಗಾಗಿ ಟೆಂಡರು ಪ್ರಕ್ರಿಯೆಯಿಂದ ಹೊರತುಪಡಿಸಬೇಕಾಗಿ ಬಂದಲ್ಲಿ, ಸದರಿ ಕಾಮಗಾರಿಗಳನ್ನು ಟೆಂಡರು ಪ್ರಕ್ರಿಯೆಯಿಂದ ಹೊರಗಿಡಲಾಗುವುದು.
20. ಈ ಟೆಂಡರು ಪ್ರಕ್ರಿಯೆಯಲ್ಲಿ ನೀಡಲಾಗುವ ಕಾರ್ಯಾದೇಶವೂ ಸಹ ಮಂಜೂರಾಗುವ ಅಂದಾಜು ಪಟ್ಟಿಯನ್ನು ಅವಲಂಬಿಸಿರುತ್ತದೆ.
21. ಟೆಂಡರ್‌ಗೆ ನಿಗದಿಪಡಿಸಿದ ಯಾವುದಾದರೂ ದಿನಾಂಕವೂ ಸರ್ಕಾರಿ ರಜೆಯಾಗಿ ಘೋಷಣೆಯಾದಲ್ಲಿ ಸದರಿ ಟೆಂಡರ್‌ನ್ನು ಮಾರನೆಯ ಕರ್ತವ್ಯ ದಿನಾಂಕದಂದು ನಡೆಸಲಾಗುವುದು. ಇದಕ್ಕಾಗಿ ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಪಿ.ಆರ್. 574

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ತುಮಕೂರು.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಟೆಂಡರ್ ಮುಂದೂಡಿಕೆ

1. ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 3-1/2009-10, ದಿನಾಂಕ: 8ನೇ ಜುಲೈ 2009

2. ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 03/2009-10, ದಿನಾಂಕ: 27ನೇ ಮೇ 2009

ರಸ್ತೆ, ಸೇತುವೆ ಹಾಗೂ ಕಟ್ಟಡಗಳ ಕಾಮಗಾರಿಗಳಿಗಾಗಿ – ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-3 ಮತ್ತು 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನ

ಈ ಅಧಿಸೂಚನೆಯಲ್ಲಿ ತಿಳಿಸಿದ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ...ತ್ತಿಗೆದಾರರಿಂದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿತ್ತು. ಸದರಿ ಕಾಮಗಾರಿಗಳ ...ಂಡರ್ ಸಲ್ಲಿಸುವ ಬಗ್ಗೆ, ಈ ಕೆಳಕಂಡಂತೆ ದಿನಾಂಕಗಳನ್ನು ಮುಂದೂಡಲಾಗಿದೆ.

1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂದರೆ http://eproc.karnataka.gov.in ಮೂಲಕ ದಿನಾಂಕ; 22.07.2009 ರಿಂದ 28.07.2009 ಸಂಜೆ 4.00 ಗಂಟೆಯೊಳಗಾಗಿ ಪಡೆಯಬಹುದಾಗಿರುತ್ತದೆ.
2. ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: 23.07.2009 (ಸಂಜೆ 3.00 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ)
3. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 28.07.2009 (ಸಂಜೆ 4.00 ಗಂಟೆಯವರೆಗೆ)
4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ; 31.07.2009 ಬೆಳಿಗ್ಗೆ 11.00 ಗಂಟೆಗೆ
5. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 06.08.2009 ಬೆಳಿಗ್ಗೆ 11.00 ಗಂಟೆಗೆ

ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಲು ಸಹಾ ...ೋರಿದೆ.

...ಆರ್. 557 ಕಾರ್ಯನಿರ್ವಾಹಕ ಇಂಜಿನಿಯರ್, ಚಿಕ್ಕಬಳ್ಳಾಪುರ, ಲೋ.ಇ. ವಿಭಾಗ, ಚಿಕ್ಕಬಳ್ಳಾಪುರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಟೆಂಡರ್ ಮುಂದೂಡಿಕೆ

1. ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (I.F.T) ಸಂಖ್ಯೆ: 08-1/2009-10, ದಿನಾಂಕ: 13ನೇ ಜುಲೈ 2009

2. ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (I.F.T) ಸಂಖ್ಯೆ: 08/2009-10, ದಿನಾಂಕ: 27ನೇ ಜೂನ್ 2009

ಭಾಗ – 1 – ಟೆಂಡರುಗಳಿಗಾಗಿ ಅರ್ಜಿ ಆಹ್ವಾನ – ಕೆ.ಡಬ್ಲೂ-I ಮತ್ತು 2 ರಂತೆ

ಈ ಅಧಿಸೂಚನೆಯಲ್ಲಿ ತಿಳಿಸಿದ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ...ತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಖಾಲಿ ಟೆಂಡರ್ ಫಾರಂಗಳನ್ನು ನೀಡುವ, ಟೆಂಡರ್‌ಗಳನ್ನು ಸ್ವೀಕರಿಸುವ, ...ರೆಯುವ ಇತ್ಯಾದಿ ದಿನಾಂಕಗಳನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ.

1. ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ: 25.07.2009 (ಬೆಳಿಗ್ಗೆ – 10.30 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ)
2. ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 28.07.2009 (ಬೆಳಿಗ್ಗೆ – 10.30 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ)

ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ: 28.07.2009 ರಂದು ಸಂಜೆ 4.30 ಗಂಟೆಗೆ ತೆರೆಯಲಾಗುವುದು.

...ೂಚನೆ: ಇತರೆ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ...ಛೇರಿಯ ಕೆಲಸದ ವೇಳೆಯಲ್ಲಿ ಪಡೆಯಲು ಸಹಾ ಕೋರಿದೆ.

...ಆರ್. 576 ಕಾರ್ಯನಿರ್ವಾಹಕ ಇಂಜಿನಿಯರ್, ಚಿಕ್ಕಬಳ್ಳಾಪುರ, ಲೋ.ಇ. ವಿಭಾಗ, ಚಿಕ್ಕಬಳ್ಳಾಪುರ

ಹೆದ್ದಾರಿ ಆಡಳಿತ ಮತ್ತು ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ

ಹೆದ್ದಾರಿ ಆಡಳಿತ ಮತ್ತು ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಚೇರಿ, ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ

ಸಂ: ಹೆಆಕಾ:ರಾಹೆವಿಕಾ:ಉಗ್ರಾಣ:ಹರಾಜು:09-10/396, ದಿನಾಂಕ: 8ನೇ ಜುಲೈ 2009

ಗ್ಯಾಂಟರಿ ವಿಲೇವಾರಿ ಟೆಂಡರು

ಎರಡನೆಯ ಕರೆ

ರಾ.ಹೆ. 17 ಕಿಮೀ. 101.400 ರಲ್ಲಿರುವ ಕಾಳಿ ಸೇತುವೆಗೆ ಅಳವಡಿಸಲಾಗಿರುವ ಗ್ಯಾಂಟರಿಯನ್ನು ಎಲ್ಲಿದೆಯೋ, ...ಗಿದೆಯೋ ಅದೇ ಸ್ಥಿತಿಯಲ್ಲಿ ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಇ.ಎಂ.ಡಿ.

ರೂ. 5000.00 ಟೆಂಡರ್ ಫಾರಂ ಬೆಲೆ ರೂ. 500.00 + 12.50% ವ್ಯಾಟ್, ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 20.07.2009ರ ಸಂಜೆ 5.30 ಗಂಟೆಯವರೆಗೆ ಖಾಲಿ ಟೆಂಡರ್ ದಾಖಲಾತಿಗಳನ್ನು ನೀಡಲು ಅಂತಿಮ ದಿನಾಂಕ: 22.7.2009ರ ಸಂಜೆ 5.30 ಗಂಟೆಯವರೆಗೆ, ಮೊಹರ್ ಬಂದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 24.07.2009 ರ ಸಂಜೆ 4.30 ಗಂಟೆಯವರೆಗೆ, ಬಹಿರಂಗ ಹರಾಜು ದಿನಾಂಕ: 27.07.2009 ರಂದು ಸಂಜೆ 4.00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಕಾರವಾರ ಇವರ ಕಚೇರಿಯಲ್ಲಿ ನಡೆಸಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಕಾರವಾರ ಇವರಿಂದ ಪಡೆಯಬಹುದು.

ಹೆದ್ದಾರಿ ಆಡಳಿತ ಮತ್ತು ಕಾರ್ಯನಿರ್ವಾಹಕ ಇಂಜನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ.

ರಾಷ್ಟ್ರೀಯ ಹೆದ್ದಾರಿಗಳು (ಲೋಕೋಪಯೋಗಿ ಇಲಾಖೆ)

ಸಂ. ಹೆಆ:ರಾಹೆವಿಕಾ:ಉಗ್ರಾಣ:ಹರಾಜು:2009–10, ದಿನಾಂಕ: 8ನೇ ಜುಲೈ 2009

ಸಾರ್ವಜನಿಕರಿಂದ ಈ ಕೆಳಗಿನ ಅನುಪಯುಕ್ತ ಸಾಮಗ್ರಿಗಳನ್ನು ಎಲ್ಲಿದೆಯೋ, ಹೇಗಿದೆಯೋ ಅದೇ ಸ್ಥಿತಿಯಲ್ಲಿ ಕೆಳಕಂಡ ಸ್ಥಳದಲ್ಲಿ ವಿಲೇವಾರಿ ಮಾಡಲು ಮೊಹರು ಮಾಡಿದ ಟೆಂಡರ್‌ಗಳನ್ನು (ದ್ವಿಪ್ರತಿಗಳಲ್ಲಿ) ಸ್ವೀಕರಿಸಲಾಗುವುದು

ಕ್ರ. ಸಂ.	ಸಾಮಗ್ರಿಗಳ ವಿವರ ಹಾಗೂ ಇರುವ ಸ್ಥಳ	ಪರಿಮಾಣ	ನಿಗದಿಪಡಿಸಿದ ಮೌಲ್ಯ	ಠೇವಣಿ ಡಿಮಂಡ್ ಡ್ರಾಫ್ಟ್ ಮೊತ್ತ ರೂ.ಗಳಲ್ಲಿ (ನಗದು ಸ್ವೀಕರಿಸಲಾಗುವುದಿಲ್ಲ)	ಟೆಂಡರ್ ದಾಖಲಾತಿಗಳ ಬೆಲೆ (ಹಿಂದಿರುಗಿಸಲಾಗುವುದಿಲ್ಲ) ಡಿಮ್ಯಾಂಡ್ ಡ್ರಾಫ್ಟ್ ಮೊತ್ತ ರೂ. ಗಳಲ್ಲಿ (ನಗದು ಸ್ವೀಕರಿಸಲಾಗುವುದಿಲ್ಲ)	ಅರ್ಜಿ ಸ್ವೀಕರಿಸಲಾಗುವ ಕೊನೆಯ ದಿನಾಂಕ	ಖಾಲಿ ಟೆಂಡರ್ ದಾಖಲಾತಿಗಳನ್ನು ನೀಡಲು ಅಂತಿಮ ದಿನಾಂಕ	ಮೊಹರ್ ಬಂದ್ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	ಬಹಿರಂಗ ಹರಾಜು ಮಾಡಲಾಗುವ ದಿನಾಂಕ
1	ರಾಹೆ–17ರ ಕಿ.ಮೀ. 101.400ರಲ್ಲಿರುವ ಕಾಳಿಸೇತುವೆಗೆ ಅಳವಡಿಸಲಾಗಿರುವ ಗ್ಯಾಂಟರಿ	6840 ಕೆ.ಜಿ (ಅಂದಾಜು)	ರಹಸ್ಯವಾಗಿ ಇಡಲಾಗಿದೆ	5000.00	500+ 12.50% VAT	20.07.09 (ಸಂಜೆ: 5.30 ಗಂಟೆವರೆಗೆ)	22.07.09 ಸಂಜೆ: 5.30 ಗಂಟೆವರೆಗೆ)	24.07.09 (ಸಂಜೆ: 4,30 ಗಂಟೆವರೆಗೆ)	27.07.09 ರಂದು ಸಂಜೆ 4.00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ ರಾ.ಹೆ.ಉಪ–ವಿಭಾಗ, ಕಾರವಾರ ಕಛೇರಿಯಲ್ಲಿ

ಹೆದ್ದಾರಿ ಆಡಳಿತ ಮತ್ತು ಕಾರ್ಯನಿರ್ವಾಹಕ ಇಂಜನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ.

ಷರತ್ತು ಮತ್ತು ನಿಬಂಧನೆಗಳು:

1. ಈ ಕಚೇರಿಯಿಂದ ನಿಗದಿಪಡಿಸಿದ ಟೆಂಡರ್ ನಮೂನೆಯನ್ನು ರೂ. 500 + 12.50% (ಹಿಂದಿರುಗಿಸಲಾಗುವುದಿಲ್ಲ) ಡಿ.ಡಿ. ಮುಖಾಂತರ, ಕಾರ್ಯನಿರ್ವಾಹಕ ಇಂಜನೀಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ ಇವರ ಹೆಸರಿಗೆ ಸಂದಾಯ ಮಾಡಿ ನಿಗದಿತ ದಿನಾಂಕದಂದು ಕಾರ್ಯಪಾಲಕ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ ಇವರ ಕಚೇರಿಯಲ್ಲಿ ಪಡೆಯಬಹುದು. ಟೆಂಡರ್‌ಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ. (ನಗದು ಮೊತ್ತವನ್ನು ಸ್ವೀಕರಿಸಲಾಗುವುದಿಲ್ಲ).
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ನಿಗದಿಪಡಿಸಿದ ಠೇವಣಿಯೊಂದಿಗೆ ಸಲ್ಲಿಸತಕ್ಕದ್ದು. ಮತ್ತು ನಮೂದಿಸುವ ಬೆಲೆಯ 50 ರಷ್ಟನ್ನು, 12.50% ಮಾರಾಟ ತೆರಿಗೆ ಸಹಿತ ಕಾರ್ಯಪಾಲಕ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ ಇವರ ಹೆಸರಿನಲ್ಲಿ ಡಿ.ಡಿ. ರೂಪದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಡಿಮ್ಯಾಂಡ್ ಡ್ರಾಫ್ಟನ್ನು ಟೆಂಡರ್‌ನೊಂದಿಗೆ ಸಲ್ಲಿಸಲು ಸಾಧ್ಯವಾಗದೇ ಹೋದಲ್ಲಿ, ಟೆಂಡರ್‌ದಾರರು ಟೆಂಡರ್ ತೆರೆಯುವ ವೇಳೆಯಲ್ಲಿ ಅವರ ಟೆಂಡರ್ ಗರಿಷ್ಠ ಮೊತ್ತವಾಗಿದ್ದಲ್ಲಿ, ಸದರಿ ಮೊತ್ತವನ್ನು ಡಿ.ಡಿ ರೂಪದಲ್ಲಿ ಸಂದಾಯ ಮಾಡಲು ಹಾಜರಿರತಕ್ಕದ್ದು. ಈ ಮೇಲಿನ ಎರಡೂ ನಿಬಂಧನೆಗಳನ್ನು ಪಾಲಿಸದೇ ಇದ್ದ ಪಕ್ಷದಲ್ಲಿ, ಅವರ ಟೆಂಡರ್‌ನ್ನು ಅತೀ ಹೆಚ್ಚಿನದಾಗಿದ್ದರೂ, ತಿರಸ್ಕರಿಸಲಾಗುವುದು. ಮೊಹರು ಮಾಡಿದ ಟೆಂಡರ್‌ಗಳನ್ನು ಕಾರ್ಯನಿರ್ವಾಹಕ ಇಂಜಿನೀಯರ್, ರಾ.ಹೆ. ವಿಭಾಗ, ಕಾರವಾರ ಕಚೇರಿಯಲ್ಲಿ ದಿನಾಂಕ: 24.07.2009 ರಂದು ಸಂಜೆ 4.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಮೊಹರು ಮಾಡಿದ ಲಕೋಟೆಯ ಮೇಲೆ ತಪ್ಪದೇ "ಗ್ಯಾಂಟರಿ ವಿಲೇವಾರಿಗಾಗಿ ಟೆಂಡರ್" ಎಂದು ನಮೂದಿಸತಕ್ಕದ್ದು. ಮೊಹರು ಮಾಡಿದ ಟೆಂಡರ್‌ಗಳನ್ನು ದಿನಾಂಕ: 27.07.2009 ರಂದು ಸಂಜೆ 4.00 ಗಂಟೆಗೆ ನಡೆಯುವ

ಬಹಿರಂಗ ಹರಾಜಿನ ನಂತರ ತೆರೆಯಲಾಗುವುದು. ಒಂದು ವೇಳೆ ಆ ದಿನ ಸಾಧ್ಯವಾಗದಿದ್ದಲ್ಲಿ ಮುಂದಿನ ಸೂಕ್ತ ದಿನಾಂಕವನ್ನು ತಿಳಿಸಲಾಗುವುದು.

3. ಮೇಲೆ ತಿಳಿಸಿರುವ ದಿನಾಂಕಗಳಲ್ಲಿ ಯಾವುದಾದರೂ ಸಾರ್ವಜನಿಕ ರಜೆ ಆಗಿದ್ದಲ್ಲಿ ಮುಂದಿನ ಕೆಲಸದ ದಿನವು ಅನ್ವಯವಾಗುತ್ತದೆ.
4. ಟೆಂಡರ್‌ನ್ನು ಅಂತಿಮವಾಗಿ ಒಪ್ಪುವ ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.
5. ಬಹಿರಂಗ ಹರಾಜು ದಿನಾಂಕ: 27.07.2009 ರಂದು ಸಂಜೆ 4.00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಕಾರವಾರ ಇವರ ಕಚೇರಿಯಲ್ಲಿ ನಡೆಯಲಿದ್ದು ಟೆಂಡರ್ ಸಲ್ಲಿಸಿರುವ ಟೆಂಡರ್‌ದಾರರು ಹಾಗೂ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವವರು ನಿಗದಿತ ಠೇವಣಿಯನ್ನು ಡಿ.ಡಿ ರೂಪದಲ್ಲಿ ಹರಾಜಿಗೆ ಮುನ್ನ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸಬಹುದು.
6. ಯಶಸ್ವಿ ಬಿಡ್ಡುದಾರರು ಸ್ಥಳದಲ್ಲಿಯೇ ಸಾಮಗ್ರಿಯ ಬಿಡ್ಡಿನ 50% ರಷ್ಟನ್ನು, ಹಾಗೂ 12.50% ಮಾರಾಟ ತೆರಿಗೆ ಮೊತ್ತವನ್ನು ಪಾವತಿಸತಕ್ಕದ್ದು.
7. ಸಕ್ಷಮ ಪ್ರಾಧಿಕಾರದಿಂದ ಟೆಂಡರ್: ಬಹಿರಂಗ ಹರಾಜಿನಲ್ಲಿಯ ಅತೀ ಹೆಚ್ಚಿನ ಬಿಡ್ಡುದಾರರು ದರದ ಮಂಜೂರಾತಿ ಪಡೆಯಲ್ಪಟ್ಟ ನಂತರ, ಯಶಸ್ವಿ ಬಿಡ್ಡುದಾರರು, ಬಾಕಿ ಉಳಿದ ಮೊತ್ತವನ್ನು ತೆರಿಗೆ ಸಹಿತ ಸಂದಾಯ ಮಾಡಿ ಸಂಬಂಧಿಸಿದ ಸಾಮಗ್ರಿಗಳನ್ನು ವಿಳಂಬ ಮಾಡದೇ 15 ದಿನಗಳ ಅವಧಿಯಲ್ಲಿ ಒಯ್ಯತಕ್ಕದ್ದು. ತಪ್ಪಿದಲ್ಲಿ ಸದರಿ ಸಾಮಗ್ರಿಯ ಮೇಲೆ ದಂಡವನ್ನು ವಿಧಿಸಲಾಗುವುದು, ಇದಕ್ಕೂ ತಪ್ಪಿದಲ್ಲಿ (ಮಂಜೂರಾತಿಯಾದ ಒಂದು ತಿಂಗಳ ನಂತರ) ಸದರಿ ಮೊಬಲಗನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
8. ಸಾಮಗ್ರಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿ ಉಪ–ವಿಭಾಗ, ಕಾರವಾರ ಇವರ ಕಛೇರಿಯಿಂದ ಪಡೆಯಬಹುದು.

ಹೆದ್ದಾರಿ ಆಡಳಿತ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ.

ಪಿ.ಆರ್. 558

ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಬಂದರು ಅಧಿಕಾರಿಯವರ ಕಚೇರಿ, ಹಳೇ ಮಂಗಳೂರು ಬಂದರು, ಮಂಗಳೂರು – 575 001

ಹರಾಜು ಪ್ರಕಟಣೆ

ನಂ.ಸಾಮಗ್ರಿ/ಸಿಆರ್–02/2008–09, ದಿನಾಂಕ: ಜೂನ್ 2009

ವಿಷಯ: ಬಂದರು ಕಛೇರಿ, ಮಂಗಳೂರು – ಹೆಚ್ಚುವರಿ ಹಳೆಯ ಸಾಮಗ್ರಿಗಳ ವಿಲೇವಾರಿ ಹರಾಜು ಮಾಡುವ ಕುರಿತು.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಬಂದರು ಕಛೇರಿ, ಮಂಗಳೂರಿನಲ್ಲಿ ನಾವೆಯ ಉಪಯೋಗಕ್ಕಾಗಿ ಹೆಚ್ಚುವರಿಯಾಗಿ ಪೂರೈಸಿದ (1) ಪ್ರೊಫೈಲರ್ – ಎರಡು ಸಂಖ್ಯೆಯದು (2) ಪ್ರೊಫೈಲರ್ ಸಾಫ್ಟ್ – ಎರಡು ಸಂಖ್ಯೆಯದು (3) ಪಂಪ್ ಸೆಟ್ – ಒಂದು ಸಂಖ್ಯೆಯದು ಇವುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲು ಬಂದರು ಕಛೇರಿ, ಮಂಗಳೂರಿನಲ್ಲಿ ದಿನಾಂಕ: 3.08.2009 ರಂದು ಅಪರಾಹ್ನ 4.00 ಗಂಟೆಗೆ ಬಹಿರಂಗ ಹರಾಜು ಕರೆಯಲಾಗಿದ್ದು, ಆಸಕ್ತಿಯುಳ್ಳ ಸಾರ್ವಜನಿಕರು / ಹರಾಜುದಾರರು ಹರಾಜಿನಲ್ಲಿ ಭಾಗವಹಿಸಲು ಕೋರಿದೆ. ಈ ಮೇಲೆ ವಿವರಿಸಲಾದ ಸಾಮಗ್ರಿಗಳ ತಗ್ಗುಬೆಲೆ ರೂ.1,10,000.00 ಇರುತ್ತದೆ.

ನಿಬಂಧನೆ ಹಾಗೂ ಷರತ್ತುಗಳು

1. ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವವರು ರೂ. 1,000.00 ಮುಂಗಡ ಠೇವಣಿಯನ್ನು ನಗದಾಗಿ ಹರಾಜು ನಡೆಯುವ ಮೊದಲು 3.00 ಗಂಟೆಯ ಒಳಗಾಗಿ ಠೇವಣಿ ಪಾವತಿ ಮಾಡತಕ್ಕದ್ದು. ಮುಂಗಡ ಠೇವಣಿಯನ್ನು ಪಾವತಿಸುವವರು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಮುಂಗಡ ಠೇವಣಿ ಪಾವತಿಸದಿರುವವರು ಭಾಗವಹಿಸಲು ಅವಕಾಶವಿರುವುದಿಲ್ಲ.
2. ಸವಾಲು ಸ್ವೀಕೃತವಾದಲ್ಲಿ ತಾತ್ಕಾಲಿಕವಾಗಿ ಅಂಗೀಕರಿಸಿದ ಮೊತ್ತದ ಶೇಕಡಾ 25 ರಷ್ಟು ಮೌಲ್ಯವನ್ನು ಹರಾಜು ಮಾಡಿದ ತಕ್ಷಣ ಸರಕಾರಕ್ಕೆ ಪಾವತಿಸತಕ್ಕದ್ದು. ತಪ್ಪಿದಲ್ಲಿ ಮುಂಗಡ ಠೇವಣಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ತಪ್ಪಿದಲ್ಲಿ ಮರು ಹರಾಜು ಮಾಡಲಾಗುವುದು.

3. ಯಶಸ್ವಿ ಸವಾಲುದಾರರು ಮೇಲಾಧಿಕಾರಿಯವರ ಅನುಮೋದನೆಯ ನಂತರ ನಿಯಮಾನುಸಾರ ಏಳು ದಿನಗಳೊಳಗಾಗಿ ಉಳಿದ ಶೇಕಡಾ 75 ರಷ್ಟು ಹಣವನ್ನು ಹಾಗೂ ಪೂರ್ತಿ ತೆರಿಗೆ ಸಹಿತ ನಗದು ರೂಪದಲ್ಲಿ ಪಾವತಿಸಿ ವಸ್ತುಗಳನ್ನು ಅವರ ಸ್ವಂತ ಖರ್ಚಿನಲ್ಲಿ ಇದ್ದ ಸ್ಥಳದಿಂದ ತೆಗೆದುಕೊಂಡು ಹೋಗತಕ್ಕದ್ದು.
4. ಯಶಸ್ವಿ ಬಿಡ್ಡುದಾರರು/ಸವಾಲುದಾರರು ಹೊರತಾಗಿ ಉಳಿದ ಸವಾಲುದಾರರು ಮುಂಗಡ ಠೇವಣಿಗಳನ್ನು ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು.
5. ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಬಂದರು ಅಧಿಕಾರಿಯವರು ಕಾಯ್ದಿರಿಸಿರುತ್ತಾರೆ.
6. ಆಸಕ್ತ ಸವಾಲುದಾರರು / ಬಿಡ್ಡುದಾರರು ಹರಾಜಿಗೆ ಹಾಕುವ ಸಾಮಗ್ರಿಗಳನ್ನು ಕಛೇರಿಯ ವೇಳೆಯಲ್ಲಿ ಬಂದು ಬಂದರು ಅಧಿಕಾರಿಯವರ ಅನುಮತಿ ಪಡೆದು ಪರಿಶೀಲಿಸಬಹುದು.

ಬಂದರು ಅಧಿಕಾರಿ, ಮಂಗಳೂರು.

ಪಿ.ಆರ್. 519

ವಾಣಿಜ್ಯ ತೆರಿಗೆ ಆಯುಕ್ತರವರ ಕಚೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ–1, ಗಾಂಧಿನಗರ, ಬೆಂಗಳೂರು

ಸಾರ್ವಜನಿಕ ಹರಾಜು ಮಾರಾಟ ಪ್ರಕಟಣೆ

ಸಂಖ್ಯೆ: ಆರ್.ಎಸ್.ಟಿ: ಪಿ.ಆರ್.–22/08–09, ಬೆಂಗಳೂರು, ದಿನಾಂಕ: 24ನೇ ಜೂನ್ 2009

ವಿಷಯ: ಬೆಂಗಳೂರಿನ ವಾಣಿಜ್ಯ ತೆರಿಗೆಯ ಇಲಾಖೆಯ ಹೊಸೂರು ರಸ್ತೆ (ಒಳ) ತನಿಖಾ ಠಾಣೆಗೆ ವಶಪಡಿಸಿಕೊಂಡಿರುವ ಜಾಗದಲ್ಲಿರುವ ಹಳೆಯ ವೇ ಬ್ರಿಡ್ಜ್‌ನ್ನು ಬಹಿರಂಗ ಹರಾಜು ಮಾರಾಟದ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಿನಾಂಕ: 27.07.2009ರಂದು ಮಧ್ಯಾಹ್ನ 3.00 ಗಂಟೆಗೆ ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆಯ ಹೊಸೂರು ರಸ್ತೆ (ಒಳ) ತನಿಖಾ ಠಾಣೆಗೆ ವಶಪಡಿಸಿಕೊಂಡಿರುವ ಜಾಗದಲ್ಲಿರುವ ಹಳೆಯ ವೇ ಬ್ರಿಡ್ಜನ್ನು ಬಹಿರಂಗ ಹರಾಜು ಮಾರಾಟದ ಮೂಲಕ ವಿಲೇವಾರಿ ಮಾಡಲಾಗುವುದು. ವಿವರಗಳು ಈ ಕೆಳಕಂಡಂತಿರುತ್ತವೆ.

1.	ಬಹಿರಂಗ ಹರಾಜು ಮಾರಾಟ ದಿನಾಂಕ	:	27.07.2009 ಮಧ್ಯಾಹ್ನ 300 ಗಂಟೆಗೆ
2.	ಭದ್ರತಾ ಠೇವಣಿ	:	ರೂ.10,000–00
3.	ಹರಾಜು ನಡೆಯುವ ಸ್ಥಳ	:	ಹೊಸೂರು ರಸ್ತೆ ತನಿಖಾ ಠಾಣೆ (ಒಳ) ಅತ್ತಿಬೆಲೆ, ಬೆಂಗಳೂರು

ನಿಬಂಧನೆಗಳು:

1. ಮೇಲೆ ತಿಳಿಸಿರುವ ಹಳೆಯ ವೇ ಬ್ರಿಡ್ಜ್‌ನ ಹರಾಜನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ) ಬೆಂಗಳೂರು ಅವರ ಸಮ್ಮುಖದಲ್ಲಿ ನಡೆಸಲಾಗುವುದು.
2. ವೇ ಬ್ರಿಡ್ಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಷರತ್ತಿನ ಮೇಲೆ ಬಹಿರಂಗ ಹರಾಜು ಮಾರಾಟ ನಡೆಸಲಾಗುವುದು.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುನ್ನ ಠೇವಣಿ ಹಣ ರೂ.10,000–00ವನ್ನು ಡಿ.ಡಿ. ರೂಪದಲ್ಲಿ ವಾಣಿಜ್ಯ ತೆರಿಗೆ ಆಯುಕ್ತರ ಪರವಾಗಿ ಪಾವತಿ ಮಾಡಬೇಕಾಗುತ್ತದೆ.
4. ಹರಾಜಿನಲ್ಲಿ ಹಣ ಕಟ್ಟಿ ಯಶಸ್ವಿಯಾಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು.
5. ಹರಾಜಿನಲ್ಲಿ ಯಶಸ್ವಿ ಬಿಡ್ಡುದಾರರು ಹರಾಜು ಮುಗಿದ ಕೂಡಲೇ ಹರಾಜು ಮಾರಾಟದ ಮೊತ್ತ ಹಾಗೂ ತೆರಿಗೆಗಳು ಸೇರಿದಂತೆ ಶೇಕಡಾ 25 ಭಾಗ ಹಣವನ್ನು ಪಾವತಿಮಾಡುವುದು. ತಪ್ಪಿದಲ್ಲಿ, ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಉಳಿದ ಶೇಕಡಾ 75 ಭಾಗ (ಠೇವಣಿ ಹಣವನ್ನು ಕಳೆದು) ಹರಾಜಿನ ಹಣವನ್ನು ಹರಾಜಿನ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಪಾವತಿಸಿ, ನಂತರ ತಮ್ಮ ಸ್ವಂತ ಖರ್ಚಿನಲ್ಲಿ ವೇ ಬ್ರಿಡ್ಜನ್ನು ಹಾಲಿ ಇರುವ ಜಾಗದಿಂದ ಯಥಾಸ್ಥಿತಿಯಲ್ಲಿ ಸಾಗಿಸಿಕೊಳ್ಳತಕ್ಕದ್ದು.
7. ಹರಾಜಿನಲ್ಲಿ ತೆಗೆದುಕೊಂಡ ವೇ ಬ್ರಿಡ್ಜನ್ನು ನಿಗದಿತ ಅವಧಿಯೊಳಗೆ ಪೂರ್ತಿ ಹಣವನ್ನು ಕಟ್ಟಿ ಸ್ವಾಧೀನಕ್ಕೆ ತೆಗೆದುಕೊಳ್ಳದೆ ಹೋದ ಪಕ್ಷದಲ್ಲಿ ಪ್ರತಿ ದಿನಕ್ಕೆ ರೂ.50–00ರಂತೆ ನೆಲಬಾಡಿಗೆ ವಿಧಿಸಲಾಗುವುದು. ಮತ್ತು ಒಂದು ತಿಂಗಳೊಳಗಾಗಿ ಪೂರ್ತಿ ಹಣ ಕಟ್ಟದಿದ್ದರೆ, ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು ವೇ ಬ್ರಿಡ್ಜನ್ನು ಮತ್ತೆ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.
8. ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ.

೯. ಬಹಿರಂಗ ಹರಾಜಿನಲ್ಲಿ ವಾದ ವಿವಾದಗಳಿಗೆ ಅವಕಾಶವಿರುವುದಿಲ್ಲ. ಯಾವುದೇ ತಕರಾರುಗಳಿಗೆ ವಾಣಿಜ್ಯ ತೆರಿಗೆ ಆಯುಕ್ತರ ತೀರ್ಮಾನವೇ ಅಂತಿಮವಾಗಿರುತ್ತದೆ.

10. ಯಾವುದೇ ಸಂದರ್ಭದಲ್ಲಿಯೂ ಹರಾಜು ಮಾರಾಟವನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ ಅಥವಾ ರದ್ದುಪಡಿಸುವ ಎಲ್ಲಾ ಅಧಿಕಾರಗಳನ್ನು ವಾಣಿಜ್ಯ ತೆರಿಗೆ ಆಯುಕ್ತರು ಹೊಂದಿರುತ್ತಾರೆ.

.ಆರ್. 566 ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಇ–ಟೆಂಡರ್ – ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

ಲೋ.ಇ:ಮಂ.ವಿ:ಟಿ.ಎನ್.ಡಿ(14ಇ):2009–10:ಎಇ1, ಮಂಗಳೂರು, ದಿನಾಂಕ: 27ನೇ ಜೂನ್ 2009

1 ಈ ಕೆಳಗೆ ತಿಳಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಟೆಂಡರ್‌ನ್ನು ಕರ್ನಾಟಕ ಸರಕಾರದ ರಾಜ್ಯಪಾಲರ ಪರವಾಗಿ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ಅರ್ಹರಾದ ಗುತ್ತಿಗೆದಾರರಿಂದ ಟೆಂಡರ್‌ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಟೆಂಡರ್ ನಿಯಮಾವಳಿಯ ಕ್ಲಾಜ್ 3 ರಂತೆ ಕನಿಷ್ಟ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ.

2. ದಿನಾಂಕ: 21.7.2009 ರಿಂದ 27.7.2009ರ ವರೆಗೆ ಟೆಂಡರುದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. (Download).

3. ಟೆಂಡರುಗಳು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿಯನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸಬೇಕು. ಇ.ಎಂ.ಡಿ.ಯನ್ನು ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬಹುದಾಗಿರುತ್ತದೆ ಮತ್ತು ಅದರ ಊರ್ಜಿತ ಅವಧಿಯು ಟೆಂಡರು ಊರ್ಜಿತ ಅವಧಿಗಿಂತ 45 ದಿನಗಳು ಹೆಚ್ಚಾಗಿ ಇರಬೇಕು.

4. ಟೆಂಡರುಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ದಿನಾಂಕ: 27.7.2009ರ ಅಪರಾಹ್ನ 4.00 ಗಂಟೆ (16 :00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.

5. ಹೆಚ್ಚಿನ ವಿವರಗಳನ್ನು ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಠೇವಣಿ (ಲಕ್ಷ ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ)
	ಲೆಕ್ಕ ಶೀರ್ಷಿಕೆ 5054 ಒ.ಆರ್.ಎಫ್			
1	ಬಂಟ್ವಾಳ ತಾಲ್ಲೂಕಿನ ಬಂಟ್ವಾಳ ಕ್ಷೇತ್ರದ ಬೈತುರ್ಲಿ–ನೀರುಮಾರ್ಗ ಕಲ್ಪನೆ ರಸ್ತೆಯ ಕಿ.ಮೀ 13.00 ರಿಂದ 15.20ರ ವರೆಗೆ ರಸ್ತೆ ಅಗಲಗೊಳಿಸಿ ಡಾಂಬರೀಕರಣ ಮತ್ತು ಅಭಿವೃದ್ಧಿ	60.00	1.20	9 ತಿಂಗಳು

ಕಾರ್ಯನಿರ್ವಾಹಕ ಇಂಜಿನಿಯರ್,

ಒ.ಆರ್. 532 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,

ಮಂಗಳೂರು ವಿಭಾಗ, ಮಂಗಳೂರು.

ಕಾರಾಗೃಹಗಳ ಇಲಾಖೆ

ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಅಂಚೆ, ಬೆಂಗಳೂರು-560 100

ಪ್ರಕಟಣೆ

ಸಂಖ್ಯೆ:ಕೇಕಾಬೆಂ/ಕಾವಿ/ಅಂಗಡಿಮಳಿಗೆ/907/2009-10, ದಿನಾಂಕ: 28ನೇ ಏಪ್ರಿಲ್ 2009

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸಮುಚ್ಚಯದಲ್ಲಿನ ಅಂಗಡಿ ಮಳಿಗೆಗಳಿಗೆ ಬಹಿರಂಗ ಹರಾಜು ಮೂಲಕ ಸ್ಪರ್ಧಾತ್ಮಕ ದರಗಳನ್ನು ಕರೆದು 2009-10ನೇ ಸಾಲಿಗೆ ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ನೀಡುವ ಬಹಿರಂಗ ಹರಾಜನ್ನು **ದಿನಾಂಕ:27.07.2009 ರಂದು ಬೆಳಿಗ್ಗೆ 11.00 ಗಂಟೆಗೆ** ನಿಗದಿಪಡಿಸಿದೆ. ಸಾರ್ವಜನಿಕರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸುವಂತೆ ಕೋರಿದೆ.

ಈ ಸಂಸ್ಥೆಯಲ್ಲಿ ಸುಮಾರು 5000 ಕ್ಕೂ ಹೆಚ್ಚಿನ ಬಂದಿಗಳಿದ್ದು, ಪ್ರತಿದಿನ (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ನೂರಾರು ಜನರು ಸಂದರ್ಶನಕ್ಕೆ ಬಂದು ಹೋಗುತ್ತಿರುತ್ತಾರೆ. ಅಲ್ಲದೆ 600 ಜನ ಸಿಬ್ಬಂದಿಗಳು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಮುಚ್ಚಯದಲ್ಲಿರುವ 187 ವಸತಿ ಗೃಹಗಳಲ್ಲಿ ಸಿಬ್ಬಂದಿಗಳು ವಾಸ ಇರುವುದರಿಂದ ಸದಾ ಜನದಟ್ಟಣೆಯಿಂದ ಕೂಡಿರುವ ಈ ಸ್ಥಳದಲ್ಲಿ ಅಂಗಡಿ ಮಳಿಗೆಗಳನ್ನು ನಡೆಸುವುದರಿಂದ ವ್ಯಾಪಾರಿ ಉದ್ದೇಶವು ಸಫಲವಾಗುವ ಭರವಸೆ ನೀಡುತ್ತಾ ಆಸಕ್ತಿಯುಳ್ಳ ಸಾರ್ವಜನಿಕರು ಹರಾಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದೆ.

ಅಂಗಡಿ ಮಳಿಗೆಗಳು ತಿಂಗಳ ಅಡಿಗೆ ಮತ್ತು ಇತರೇ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ವಾಣಿಜ್ಯ ಮಳಿಗೆಯ ಹೆಸರು/ಕ್ರಮ ಸಂಖ್ಯೆ	ವಿಸ್ತೀರ್ಣ ಚ.ಅಡಿ.ಗಳಲ್ಲಿ	ಅವಧಿ	ಮಾಸಿಕ ಬಾಡಿಗೆ ಶುಲ್ಕ	10 ತಿಂಗಳ ಬಾಡಿಗೆಯಷ್ಟು ಭದ್ರತಾ ಠೇವಣಿ	ಹರಾಜಿನಲ್ಲಿ ಭರಿಸಬೇಕಾದ ಇಡುಪು ಠೇವಣಿ
1	ಫ್ಯಾನ್ಸಿ ಶಾಪ್-01	(3.25x6) (1 ಯೂನಿಟ್)	11 ತಿಂಗಳು	980/-	ನಿಗದಿಯಾದ ಬಾಡಿಗೆಯ 10 ತಿಂಗಳ ಮೊತ್ತವನ್ನು ಠೇವಣಿಯಾಗಿ ಇಡುವುದು	1,000/-
2	ಹಾಲಿನ ಮಳಿಗೆ-04	(3.25x6) (1 ಯೂನಿಟ್)	11 ತಿಂಗಳು	980/-		1,000/-
3	ದಾಸ್ತಾನು ಮಳಿಗೆ-10	(3.25x6) (1 ಯೂನಿಟ್)	11 ತಿಂಗಳು	980/-		1,000/-
4	ಹಿಟ್ಟಿನ ಗಿರಣಿ-11	(3.25x6) (1 ಯೂನಿಟ್)	11 ತಿಂಗಳು	980/-		1,000/-

ಮೇಲ್ಕಂಡ ಅಂಗಡಿ ಮಳಿಗೆಗಳಿಗೆ ಭಾಗವಹಿಸುವವರು ಸಂಬಂಧಪಟ್ಟ ಅಧಿಕಾರಿಯಿಂದ ಸಂಬಂಧಿಸಿದ ಲೈಸನ್ಸ್ ಪಡೆದುಕೊಂಡಿರಬೇಕು. ಬಹಿರಂಗ ಹರಾಜಿನಲ್ಲಿ ಅದರ ದಾಖಲೆಗಳನ್ನು ಒಪ್ಪಿಸಬೇಕಾಗುವುದು.

ಮೇಲ್ಕಂಡ ಅಂಗಡಿ ಮಳಿಗೆಯನ್ನು ಹೆಚ್ಚಿನ ಮೊಬಲಿಗಿಗೆ ಹರಾಜಿನಲ್ಲಿ ಪಡೆದುಕೊಂಡ ಮೇಲೆ ಹರಾಜಿನಲ್ಲಿ ಕೂಗಿರುವ ಹೆಚ್ಚಿನ ಮೊಬಲಗು 10 ತಿಂಗಳ ಬಾಡಿಗೆ ಮೇಲೆ ಶೇಕಡ 10 ರಷ್ಟು ಪ್ರಾರಂಭಿಕ ಠೇವಣಿಯನ್ನು ಸ್ಥಳದಲ್ಲಿಯೇ ಭರಿಸಬೇಕಾಗುವುದು.

ಹೆಚ್ಚಿನ ಮಾಹಿತಿಗಳು ಮತ್ತು ನಿಬಂದನೆಗಳು ವಿವರಗಳು ಬೇಕಾಗಿದ್ದಲ್ಲಿ ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು ಇವರಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಹರಾಜಿನ ದರವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ರವರ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಪಿ.ಆರ್. 572

ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು.

FORM - IV
(See Rule 12)
NOTICE

It is hereby notified that the undersigned has changed his/her name from **SADASHIV SHANKAR CHAMBAR** to **SADASHIV SHANKAR CHOUGALA**

P.D. 109

SADASHIV SHANKAR CHAMBAR

FORM - IV
(See Rule 12)
NOTICE

It is hereby notified that the undersigned has changed his/her name from **F.S. CHALAVADI** to **F.S. SOMAGIRI**

P.D. 110

F.S. CHALAVADI

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 09/2009-10, ದಿನಾಂಕ: 14ನೇ ಜುಲೈ 2009 (2ನೇ ಕರೆ)

ಸೆಕ್ಷನ್ - 1 ಟೆಂಡರುಗಳಿಗಾಗಿ ಅರ್ಜಿ ಆಹ್ವಾನ (IFT)

(ರಸ್ತೆ, ಸೇತುವೆ ಹಾಗೂ ಕಟ್ಟಡಗಳ ಕಾಮಗಾರಿಗಳಿಗಾಗಿ - ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ-3 ಮತ್ತು 4ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನ)

1. ಈ ಕೆಳಗೆ ತಿಳಿಸಿದ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ - 562 101 ರವರು ಮ್ಯಾನ್ಯೂಯಲ್ ಮೂಲಕ ರಾಜ್ಯಪಾಲರು, ಕರ್ನಾಟಕ ಸರ್ಕಾರ ರವರ ಪರವಾಗಿ ಐಟಮ್-ರೇಟ್ ಟೆಂಡರ್‌ಗಳನ್ನು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಧಿಸೂಚನೆಯಲ್ಲಿ ಸೂಚಿಸಿರುವ ದಿನಾಂಕದೊಳಗೆ (ದ್ವಿಲಕೋಟೆಗಳಲ್ಲಿ) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು ಟೆಂಡರ್ ದಾಸ್ತಾವೇಜಿನಲ್ಲಿರುವಂತೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಗೆ ಬೇಕಾಗುವ ಕನಿಷ್ಠತಮ ಪೂರ್ವಾರ್ಹತೆಯ ಬಗ್ಗೆ ಟೆಂಡರ್ ದಾಸ್ತಾವೇಜಿನ ಭಾಗ-3ರಡಿ ಗುತ್ತಿಗೆದಾರರಿಗೆ ನೀಡಿರುವ ಸೂಚನೆಗಳನ್ನು ನೋಡಲು ಕೋರಲಾಗಿದೆ,
2. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂದರೆ https://eproc.karnataka.gov.in ಮೂಲಕ ದಿನಾಂಕ: 24.07.2009 ರಿಂದ 29.07.2009 ರವರಿಗೆ ಪಡೆಯ ಬಹುದಾಗಿರುತ್ತದೆ.
3. ಟೆಂಡರ್‌ನೊಂದಿಗೆ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಇ.ಎಂ.ಡಿ. ಹಣವನ್ನು ಟೆಂಡರ್ ಅರ್ಹತಾ ಅವಧಿಯನ್ನು ಬಿಟ್ಟು ಹೆಚ್ಚಿನ 45 ದಿನಗಳ ಅವಧಿಯನ್ನು ಒಳಗೊಂಡಿರುವಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ರೂಪದಲ್ಲಿ ಪಾವತಿಸುವುದು.
4. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ದಿನಾಂಕ: 29.07.09 ರಂದು ಸಂಜೆ 4.00 ಗಂಟೆ ಒಳಗಾಗಿ ಸಲ್ಲಿಸತಕ್ಕದ್ದು. ಮತ್ತು ಸದರಿ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಗೈಡ್‌ಲೈನ್‌ನಂತೆ / ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ನಿಗದಿತ ಸಮಯದಲ್ಲಿ ತೆರೆಯಲಾಗುವುದು.
5. ಟೆಂಡರ್ ಪೂರ್ವ ಸಭೆಯನ್ನು ಕಾಮಗಾರಿ ಕ್ರಮ ಸಂಖ್ಯೆ-5ಕ್ಕೆ ದಿನಾಂಕ: 25.07.2009 ರಂದು ಮಧ್ಯಾಹ್ನ 3.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರ ಕಛೇರಿಯಲ್ಲಿ ನಡೆಸಲಾಗುವುದು.
6. ಹೆಚ್ಚಿನ ಮಾಹಿತಿಗಾಗಿ www.kpwd.gov.in ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಕೋಷ್ಟಕ

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಇ.ಎಂ.ಡಿ. (ರೂ. ಲಕ್ಷಗಳಲ್ಲಿ)	ಟೆಂಡರ್ ಪ್ರೊಸೆಸಿಂಗ್ ಶುಲ್ಕ (ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಗೊತ್ತುಪಡಿಸಲಾದ ಕಾಲಾವಧಿ ಮಳೆಗಾಲ ಸೇರಿ ಒಟ್ಟು
1.	ಬಾಗೇಪಲ್ಲಿ ತಾ. ವೈ.ಸಿ. ರಸ್ತೆಯಿಂದ ಪಿ.ಬಿ.ಆರ್.ಸಿ.ಪಿ. ರಸ್ತೆ ಮಾರ್ಗ ಮೂಗಿರೆಡ್ಡಿಪಲ್ಲಿ, ಕೊತ್ತಕೋಟವಾಡ್ಲ ಪಲ್ಲಿ, ನಲ್ಲಸಾನಪಲ್ಲಿ (1ನೇ ಹಂತ) ರಸ್ತೆ ಅಭಿವೃದ್ಧಿ ಕಾಮಗಾರಿ	75.00	1.50		6 ತಿಂಗಳು
2.	ಚಿಕ್ಕಬಳ್ಳಾಪುರ ತಾ. ಎ.ಡಿ. ರಸ್ತೆಯಿಂದ ಎಸ್.ಡಿ. ರಸ್ತೆ ಮಾರ್ಗ ನಲ್ಲಮರದಹಳ್ಳಿ, ಹಿರಿಯಣ್ಣನಹಳ್ಳಿ, ಬಡನಿಂಗನಹಳ್ಳಿ, ಶೆಟ್ಟಿಹಳ್ಳಿ, ಮಲ್ಲಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ	86.00	1.72		6 ತಿಂಗಳು

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಇ.ಎಂ.ಡಿ. (ರೂ. ಲಕ್ಷಗಳಲ್ಲಿ)	ಟೆಂಡರ್ ಪ್ರೊಸೆಸಿಂಗ್ ಶುಲ್ಕ (ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಗೊತ್ತಪಡಿಸಲಾದ ಕಾಲಾವಧಿ ಮಳೆಗಾಲ ಸೇರಿ ಒಟ್ಟು
3.	ಚಿಂತಾಮಣಿ ತಾ. ಎಸ್.ಬಿ.ಎ. ರಸ್ತೆಯಿಂದ ಚಿಂತಾಮಣಿ–ಚೇಳೂರು ರಸ್ತೆಗೆ ಸೇರುವ ರಸ್ತೆಯ ಮಾರ್ಗ ಯಸಗಳಹಳ್ಳಿ, ಮರಬಹಳ್ಳಿ (1ನೇ ಹಂತ) ರಸ್ತೆ ಅಭಿವೃದ್ಧಿ ಕಾಮಗಾರಿ	80.00	1.60	ಇ–ಪೋರ್ಟಲ್ ಆಧಾರಿತ	6 ತಿಂಗಳು
4.	ಚಿಂತಾಮಣಿ ತಾ. ಅಟ್ಟೂರು–ಹೊಸಹಳ್ಳಿ ರಸ್ತೆಯಿಂದ ಬಿ.ಸಿ. ರಸ್ತೆಗೆ ಮಾರ್ಗ ವಿರೂಪಾಕ್ಷಪುರ, ಅಕ್ಕಿಮಂಗಲ ಹೆಣ್ಣೂರು, ಬಿರ್ಜೇನಹಳ್ಳಿ (1ನೇ ಹಂತ) ರಸ್ತೆ ಅಭಿವೃದ್ಧಿ ಕಾಮಗಾರಿ)	100.00	2.00		6 ತಿಂಗಳು
5.	ಗೌರಿಬಿದನೂರು ತಾ. ಗುಂಡಾಪುರದಿಂದ ಕೋಟಾಲದಿನ್ನೆ–ಅಲಿಪುರ ರಸ್ತೆಗೆ ಸೇರುವ ರಸ್ತೆಯ ಮಾರ್ಗ ಚೆನ್ನನಹಳ್ಳಿ, ಕೆ.ಟಿ.ಹಳ್ಳಿ, ಉಪ್ಪಾರಹಳ್ಳಿ (1ನೇ ಹಂತ) ರಸ್ತೆ ಅಭಿವೃದ್ಧಿ ಕಾಮಗಾರಿ	105.00	2.00		6 ತಿಂಗಳು
6.	ಶಿಡ್ಲಘಟ್ಟ ತಾ. ಗೊಲ್ಲಹಳ್ಳಿಯಿಂದ ಬಿ.ಬಿ. ರಸ್ತೆಯ ಮಾರ್ಗ ಕುಂದಲಗುರ್ಕಿ, ರೊಪ್ಪಾರ್ಲಹಳ್ಳಿ, ಗಂಗಾಪುರ, ಕಾಚಹಳ್ಳಿ (1ನೇ ಹಂತ) ರಸ್ತೆ ಅಭಿವೃದ್ಧಿ ಕಾಮಗಾರಿ	79.50	1.60		6 ತಿಂಗಳು

ಸೂಚನೆ: ಕಾಮಗಾರಿ ಸಂಖ್ಯೆ–5ರ ಬಗ್ಗೆ ಕೆ.ಡಬ್ಲ್ಯೂ–4 ದಸ್ತಾವೇಜಿನ ಸೂಚನೆಗಳನ್ನು ಪಾಲಿಸುವುದು.

1. ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: 25.07.2009 (ಸಂಜೆ 3.00 ಗಂಟೆಗೆ ಕಛೇರಿ ವೇಳೆಯಲ್ಲಿ)
2. ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 29.07.2009 (ಸಂಜೆ 4.00 ಗಂಟೆಯವರೆಗೆ)
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 01.08.2009 ಬೆಳಿಗ್ಗೆ 11.00 ಗಂಟೆಗೆ
4. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 10.08.2009 ಬೆಳಿಗ್ಗೆ 11.00 ಗಂಟೆಗೆ

ಕಾರ್ಯನಿರ್ವಾಹಕ ಇಂಜಿನಿಯರ್,
ಪಿ.ಆರ್. 582
ಚಿಕ್ಕಬಳ್ಳಾಪುರ ಲೋ.ಇ. ವಿಭಾಗ, ಚಿಕ್ಕಬಳ್ಳಾಪುರ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಯಲ್ಲಾಪುರ ವಿಭಾಗ, ಯಲ್ಲಾಪುರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ.

ಕ್ರ.ಸಂ :ಎ7/ಹರಾಜು/2009–10, ದಿನಾಂಕ: 30ನೇ ಜೂನ್ 2009

ನಿರುಪಯುಕ್ತ ಹಾಗೂ ಅರಣ್ಯ ಅಪರಾಧಗಳಲ್ಲಿ ಒಳಗೊಂಡ, ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳ ಟೆಂಡರ್ ಕಮ್ ಹರಾಜಿನ ಕುರಿತಾದ ಷರತ್ತುಗಳು

ಈ ಮೂಲಕ ಯಾವತ್ತೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಯಲ್ಲಾಪುರ ಅರಣ್ಯ ವಿಭಾಗದಲ್ಲಿ ಅರಣ್ಯ ಅಪರಾಧಗಳಲ್ಲಿ ಒಳಗೊಂಡ ಹಾಗೂ ಮುಟ್ಟುಗೋಲು ಹಾಕಿಕೊಳ್ಳಲಾದ ಹಾಗೂ ನಿರುಪಯುಕ್ತವಾದಂತಹ ಈ ಕೆಳಗೆ ನಮೂದಿಸಿದಂತ ವಾಹನಗಳನ್ನು ಬಹಿರಂಗವಾಗಿ ಟೆಂಡರ್ ಕಮ್ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು. ಸದರಿ ನಿರುಪಯುಕ್ತ ಹಾಗೂ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳನ್ನು ಇದ್ದ ಸ್ಥಳದಲ್ಲಿಯೇ ಯಾವ ಸ್ಥಿತಿಯಲ್ಲಿ ಇವೆಯೋ ಅದೇ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು. ಕಾರಣ ಆಸಕ್ತಿಯುಳ್ಳವರು ಸದರಿ ಟೆಂಡರ್ ಕಮ್ ಹರಾಜಿನಲ್ಲಿ ಭಾಗವಹಿಸಿ ವಾಹನಗಳನ್ನು ಪಡೆದುಕೊಳ್ಳಬಹುದಾಗಿದೆ. ಟೆಂಡರ್ ಕಮ್ ಹರಾಜನ್ನು **ದಿನಾಂಕ : 12–08–2009** ರಂದು ಕರೆಯಲಾಗಿದ್ದು ಅದೇ ದಿನ ಮಧ್ಯಾಹ್ನ 3.00 ಘಂಟೆ ಸಮಯದ ನಂತರ ಮೊದಲು ಸವಾಲನ್ನು ಮಾಡಿ ನಂತರ ಟೆಂಡರ್‌ಗಳನ್ನು ತೆರೆಯಲಾಗುವುದು.

ಟೆಂಡರ್ ಕಮ್ ಸವಾಲನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲ್ಲಾಪುರ ವಿಭಾಗ, ಯಲ್ಲಾಪುರ ರವರು ಸದರಿ ದಿನಾಂಕದಂದು ಖುದ್ದಾಗಿ ಅಥವಾ ಅವರಿಂದ ಅಧಿಕಾರವನ್ನು ಪಡೆದಂತಹ ಅಧಿಕಾರಿಗಳು ಯಲ್ಲಾಪುರ ವಿಭಾಗೀಯ ಕಛೇರಿಯಲ್ಲಿ ನೆರವೇರಿಸುವರು.

ಖರೀದಿದಾರರು ಸವಾಲಿನಲ್ಲಿ ಭಾಗವಹಿಸಿ ತಮ್ಮ ಅತೀ ಹೆಚ್ಚಿನ ಬೇಡಿಕೆಗಳನ್ನು ನೀಡಬಹುದು. ಅಥವಾ ಟೆಂಡರಿನಲ್ಲಿಯೂ ಸಹ ಭಾಗವಹಿಸಿ ತಮ್ಮ ಬೇಡಿಕೆ ನೀಡಬಹುದಾಗಿದೆ. ಹೀಗೆ ನೀಡಲಾದ ಬೇಡಿಕೆಗಳಲ್ಲಿ ಯಾವುದು ಹೆಚ್ಚು ಅದನ್ನು ಮಾತ್ರ ಪರಿಗಣಿಸಲಾಗುವುದು.

ಕ. ಸಂ	ವಾಹನದ ವಿವರ	ವಾಹನ ಸಂಖ್ಯೆ	ಚೆಸ್ಸಿ ನಂ	ಇಂಜಿನ್ ನಂ	ವಾಹನದ ಮಾದರಿ	ವಾಹನ ಇರುವ ಸ್ಥಳ	ಷರಾ
1	ಮಾರುತಿ ಜಿಪ್ಸಿ	ಕೆಎ–01–ಜಿ –892	SJ41IN146274	F10AIN162251	12/1992	ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ರವರ ಕಛೇರಿ ಆವರಣ	ನಿರುಪಯುಕ್ತಗೊಳಿಸಿದ ಇಲಾಖಾ ವಾಹನ
2	ಮಾರುತಿ ಜಿಪ್ಸಿ	ಸಿಎಜಿ–9715	SJ4IN105415	F10AIN103068	2/1988	.. ಸದರ ..	
3	HGV ಅಶೋಕ ಲೇಲ್ಯಾಂಡ್	ಕೆಎ–27–1581	RTE29059	RTE172468	1993	.. ಸದರ ..	ಇಲಾಖೆಗೆ ಮುಟ್ಟುಗೋಲು ಹಾಕಿಕೊಂಡಿರುವ ವಾಹನಗಳು
4	ರಿಕ್ಷಾ	ಕೆಎ–25–9598	22CBCLO2831	--	--	.. ಸದರ ..	
5	ಅಶೋಕ ಲೇಲ್ಯಾಂಡ್ ಕಾಮೆಂಟ – AC–1611	ಕೆಎ–07–1235	NWE273472	NUE153948	7/1992	.. ಸದರ ..	
6	ಪ್ರಿಮಿಯರ್ ಪದ್ಮಿನಿ (ಫಿಯೇಟ್ ಕಾರ್)	ಸಿಟಿಇ–77	PAXBEX451344	PAX-F46796	1988	.. ಸದರ ..	
7	ಎಲ್‌ಜಿವಿ ಟೆಲ್ಕೋ (ಮಿನಿಲಾರಿ 407)	ಕೆಎ–35–3354	357125KYZ815743	497SPTC31KYZ892594	2002	.. ಸದರ ..	
8	ಬಜಾಜ್ ಎಂ–80	ಕೆಎ–27 ಇ–5212	16C94L81622	16E94L82104	--	.. ಸದರ ..	
9	ಎಲ್‌ಜಿವಿ (ಟಾಟಾ 608)	ಕೆಎ–19–ಎ–5010	386125KZZ821904	497TC84KZZ769546	9/2000	.. ಸದರ ..	

ದಿನಾಂಕ:12.08.2009 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಲ್ಲಿ ವಾಹನಗಳ ಟೆಂಡರ್ ಕಮ್ ಬಹಿರಂಗ ಹರಾಜಿನ ಷರತ್ತುಗಳು

1. ಟೆಂಡರ್‌ಗಳನ್ನು ಇಲಾಖೆಯು ನಿರ್ದಿಷ್ಟಪಡಿಸಿದಂತಹ ಮುದ್ರಿತ ಫಾರಂನಲ್ಲಿಯೇ ಕೊಡತಕ್ಕದ್ದು ಇಂತಹ ಫಾರಂಗಳು ಈ ಕಛೇರಿಯಲ್ಲಿ ಲಭ್ಯವಿದ್ದು ಟೆಂಡರಿನ ದಿನದಂದು ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಮಾತ್ರ ನೀಡಲಾಗುವುದು. ಪ್ರತಿ ಫಾರ್ಮಿನ ಮೌಲ್ಯ ರೂ. 500.00 ಹಾಗೂ ಚಾಲ್ತಿಯಲ್ಲಿರುವ ಇತರೇ ಕರಗಳನ್ನು ನೀಡಿ ಪಡೆಯಬಹುದಾಗಿದೆ. ಸದರಿ ಟೆಂಡರ್ ಫಾರಂಗಳನ್ನು ವರ್ಗಾವಣೆ ಮಾಡುವುದನ್ನು ನಿಷೇಧಿಸಲಾಗಿದೆ.
2. ಖರೀದಿದಾರರು ಕಾಲಂ ನಂ 5 ರಲ್ಲಿ ಈ ಮೇಲೆ ನಮೂದಿಸಿದಂತೆ ಪ್ರತಿ ವಾಹನಕ್ಕೆ ಅಮಾನತ್ ಮೊತ್ತವನ್ನು ಟೆಂಡರ್ ಹಾಕುವುದಾದರೆ ಡಿಡಿ ರೂಪದಲ್ಲಿ ಅಥವಾ ಹರಾಜಿನಲ್ಲಿ ಭಾಗವಹಿಸುವುದಾದರೆ ಡಿಡಿ/ನಗದು ರೂಪದಲ್ಲಿ ನೀಡುವುದು ಕಡ್ಡಾಯವಾಗಿರುತ್ತದೆ. (ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ ಹುಂಡಿ) ಯಲ್ಲಾಪುರ ವ್ಯಾಪ್ತಿಯಲ್ಲಿರುವ ಬ್ಯಾಂಕುಗಳು.

3. ಪ್ರತಿ ವಾಹನಗಳನ್ನು ಪ್ರತ್ಯೇಕವಾದ ಯುನಿಟ್‌ಗಳೆಂದು ಪರಿಗಣಿಸಲಾಗಿದೆ. ಕಾರಣ ಖರೀದಿದಾರರು ಸದ ವಾಹನಗಳ ಕುರಿತು ಟೆಂಡರ್ ಹಾಕುವುದಿದ್ದಲ್ಲಿ ಪ್ರತಿ ವಾಹನಕ್ಕೆ ಪ್ರತ್ಯೇಕವಾದ ಟೆಂಡರ್‌ನ್ನು ಕೊಡತಕ್ಕದ್ದು. ಒಂದ ವೇಳೆ ಒಂದಕ್ಕಿಂತ ಹೆಚ್ಚು ಟೆಂಡರುಗಳನ್ನು ಹಾಕುವುದಾದಲ್ಲಿ ಒಂದೇ ಲಕೋಟೆಯಲ್ಲಿ ಹಾಕಬಹುದಾಗಿದೆ.
4. ಇನ್ನು ಕೇವಲ ಸವಾಲಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸವಾಲಿನ ಪೂರ್ವದಲ್ಲಿ ಅವರು ಎಷ್ಟು ವಾಹನಗ ಕುರಿತಾಗಿ ಸವಾಲನ್ನು ಮಾಡಲಿಚ್ಚಿಸುವರೋ ಅಂತಹ ವಾಹನಗಳ ಎದುರಿಗೆ ನಮೂದಿಸಿದ ಅಮಾನತ್ತು ರಕ ಹುಂಡಿ / ನಗದು ರೂಪದಲ್ಲಿ ಸವಾಲು ಮಾಡುವ ಅಧಿಕಾರಿಗಳ ಕಡೆಗೆ ಕೊಡಬೇಕು (ಯಾವುದೇ ರಾಷ್ಟ್ರೀಕೃ ಹುಂಡಿ) ಯಲ್ಲಾಪುರ ವ್ಯಾಪ್ತಿಯ ಬ್ಯಾಂಕುಗಳು.
5. ಟೆಂಡರ್/ಸವಾಲಿನಲ್ಲಿ ಯಶಸ್ವಿಯಾದ ಖರೀದಿದಾರರು ಅದೇ ದಿನದಂದು ಅವರು ಖರೀದಿಸಿದ ವಾಹನಗ ಮೌಲ್ಯದ ಶೇಕಡಾ 50 ರಷ್ಟು ಹಾಗೂ ಒಟ್ಟು ಮೌಲ್ಯದ ಮೇಲೆ ಆಕರಣೆ ಮಾಡತಕ್ಕ ಇತರೇ ಕರಗಳನ ಪಾವತಿಸತಕ್ಕದ್ದು ಇನ್ನುಳಿದ ಬಾಕಿ ಶೇಕಡಾ 50 ರ ಮೌಲ್ಯವನ್ನು ಸವಾಲಿನ ದಿನದಿಂದ 30 ದಿನಗಳೊಳಗಾ ಪಾವತಿಸಿ ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಇದ್ದ ಸ್ಥಳದಿಂದ ಸಾಗಾಣಿಕೆ ಮಾಡಿಕೊಳ್ಳತಕ್ಕದ್ದು.
6. ವಾಹನಗಳನ್ನು ಕಛೇರಿ ಆವರಣದಲ್ಲಿ ಮುರಿಯುವುದು ಅಥವಾ ಅದರ ಭಾಗಗಳನ್ನು ಬೇರ್ಪಡಿಸಿ ತೆಗೆದುಕೊಂಡ ಹೋಗುವುದನ್ನು ನಿಷೇಧಿಸಿದೆ.
7. ಈ ಮೇಲೆ ನಮೂದಿಸಿದಂತೆ ವಾಹನ ಖರೀದಿದಾರರು ತಾವು ಖರೀದಿಸಿದ ವಾಹನಗಳ ಮೌಲ್ಯವನ್ನು ನಿಗದಿ ಸಮಯದಲ್ಲಿ ಪಾವತಿಸದಿದ್ದಲ್ಲಿ ಅಂತಹ ವಾಹನಗಳನ್ನು ಅವರ ಜವಾಬ್ದಾರಿಯ ಮೇಲೆ ಮರು ಹರಾಜ ಮಾಡಲಾಗುವುದು ಒಂದು ವೇಳೆ ಮರು ಹರಾಜಿನಲ್ಲಿ ಸರಕಾರಕ್ಕೆ ಹಾನಿ ಸಂಭವಿಸಿದಲ್ಲಿ ಅದನ್ನು ಮೂ ಖರೀದಿದಾರರಿಂದ ಜಮೀನು ಮಹಸೂಲ ಬಾಕಿಯಂತೆ ಅಥವಾ ದಿವಾಣಿ ನ್ಯಾಯಾಲಯದ ಡಿಕ್ರಿಯಂ ವಸೂಲು ಮಾಡಲಾಗುವುದು. ಮರು ಸವಾಲಿನಿಂದ ಲಾಭವಾದಲ್ಲಿ ಅದರ ಮೇಲೆ ಖರೀದಿದಾರರ ಹಕ ಇರುವುದಿಲ್ಲ.
8. ಇನ್ನು ಎರಡಾವರ್ತಿ ಮೇಲೆ ಇಟ್ಟಂತಹ ಟೆಂಡರ್/ ಸವಾಲುದಾರರ ಬೇಡಿಕೆಯು ಮೇಲಾಧಿಕಾರಿಗಳಿಂ ಮಂಜೂರು/ನಾ ಮಂಜೂರಿ ಆಗುವ ಪೂರ್ವದಲ್ಲಿ ಸವಾಲಿನ ದಿನದಿಂದ ಖರೀದಿದಾರರು ಖರೀದಿಸಿದ ಶೇಕಡ 50 ರಷ್ಟು ಮೌಲ್ಯ ಹಾಗೂ ಮೌಲ್ಯದ ಮೇಲೆ ಆಕರಣೆ ಮಾಡಬಹುದಾದಂತಹ ತೆರಿಗೆಯನ್ನು ಪಾವ ಮಾಡಬೇಕು. ಇನ್ನುಳಿದ ಶೇಕಡಾ 50 ರ ಮೊತ್ತವನ್ನು ಮಂಜೂರಿ ತಿಳಿಸಿದ ದಿನಾಂಕದಿಂದ 7 ದಿನಗಳೊಳಗಾ ಈ ಕಛೇರಿಯಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅಂತಹ ವಾಹನಗಳನ್ನು ಮರು ಸವಾಲ ಮಾಡಲಾಗುವುದು. ಸದರಿ ಮರು ಸವಾಲಿನಲ್ಲಿ ಸರಕಾರಕ್ಕೆ ಹಾನಿ ಸಂಭವಿಸಿದಲ್ಲಿ ಅದನ್ನು ಮೂ ಖರೀದಿದಾರರಿಂದ ಜಮೀನು ಮಸೂಲ ಬಾಕಿಯಂತೆ ಅಥವಾ ದಿವಾಣಿ ನ್ಯಾಯಾಲಯದ ಡಿಕ್ರಿಯಂತೆ ವಸೂಲ ಮಾಡಲಾಗುವುದು. ಮರು ಸವಾಲಿನಿಂದ ಲಾಭವಾದಲ್ಲಿ ಅದರ ಮೇಲೆ ಖರೀದಿದಾರರ ಹಕ್ಕು ಇರುವುದಿಲ್ಲ.
9. ಎರಡಾವರ್ತಿ ಮೇಲಿಟ್ಟ ಟೆಂಡರ್/ ಸವಾಲಿನ ಬೇಡಿಕೆಗಳು ತಿರಸ್ಕೃತಗೊಂಡಲ್ಲಿ ಅಂತಹ ಖರೀದಿದಾರರ ಪಾವತಿಸಿದಂತಹ ಅಮಾನತ್ತು ಹಣ ಹಾಗೂ ಶೇಕಡಾ 50 ರ ಮೊತ್ತವನ್ನು ಮರು ಪಾವತಿ ಮಾಡಲಾಗುವುದು.
10. ಎರಡಾವರ್ತಿ ಮೇಲೆ ಇಟ್ಟಂತಹ ಖರೀದಿದಾರರ ಟೆಂಡರ್/ಸವಾಲನ್ನು ಮಂಜೂರಿಗಾಗಿ ನಿರೀಕ್ಷಿ ಮೇಲಾಧಿಕಾರಿಗಳಿಗೆ ಸಲ್ಲಿಸಿದ ಸಮಯದಲ್ಲಿ ಖರೀದಿದಾರರು ತಮ್ಮ ಬೇಡಿಕೆಯನ್ನು ಹಿಂದಕ್ಕೆ ಪಡೆದುಕೊಂಡ ಟೆಂಡರ್ / ಸವಾಲಿನ ಜೊತೆಯಲ್ಲಿ ಇಟ್ಟಂತಹ ಅಮಾನತ್ ಹಣ ಹಾಗೂ ಶೇಕಡಾ 50 ರ ಮೌಲ್ಯವನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಅಂತಹ ವಾಹನಗಳನ್ನು ಮರು ಸವಾಲ ಮಾಡಲಾಗುವುದು. ಒಂದು ವೇಳೆ ಮರು ಹರಾಜಿನಲ್ಲಿ ಸರಕಾರಕ್ಕೆ ಹಾನಿ ಸಂಭವಿಸಿದಲ್ಲಿ ಅದನ್ನು ಮೂ ಖರೀದಿದಾರರಿಂದ ಜಮೀನು ಮಹಸೂಲ ಬಾಕಿಯಂತೆ ಅಥವಾ ದಿವಾಣಿ ನ್ಯಾಯಾಲಯ ಡಿಕ್ರಿಯಂತೆ ವಸೂಲ ಮಾಡಲಾಗುವುದು. ಮರು ಸವಾಲಿನಿಂದ ಲಾಭವಾದಲ್ಲಿ ಅದರ ಮೇಲೆ ಖರೀದಿದಾರರ ಹಕ್ಕು ಇರುವುದಿಲ್ಲ.
11. ಯಶಸ್ವಿ ಖರೀದಿದಾರರು ವಾಹನದ ಮಾಲೀಕತ್ವದ ವರ್ಗಾವಣೆ ಕುರಿತು ತಮ್ಮ ಸ್ವಂತ ಖರ್ಚಿನಲ್ಲಿಯೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳತಕ್ಕದು ಈ ಕುರಿತು ಈ ಕಛೇರಿಯಲ್ಲಿ ಲಭ್ಯವಿದ್ದ ವಾಹನಗಳ ದಾಖಲಾತಿಗಳನ್ನು ನೀಡಲಾಗುವುದು.
12. ಟೆಂಡರ್ ಕೊಡಲು ಇಚ್ಛಿಸುವವರು ಟೆಂಡರ್‌ನಲ್ಲಿರುವ ಕಾಲಂಗಳಲ್ಲಿ ಸ್ಪಷ್ಟವಾಗಿ ಹಾಗೂ ಸಮಂಜಸವಾಗಿ ಭರಿ ಶೀಲ್ ಬಂದ ಲಕೋಟೆಯಲ್ಲಿ ಲಕೋಟೆ ಮೇಲೆ 2009-10ನೇ ಸಾಲಿನಲ್ಲಿ ವಾಹನಗಳ ಕುರಿತಾದ ಟೆಂಡರ

ಎಂದು ನಮೂದಿಸಿ ಈ ಕಛೇರಿಯಲ್ಲಿ ದಿನಾಂಕ: 12.08.2009 ರಂದು ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ಮಧ್ಯಾಹ್ನ 3.00 ಗಂಟೆಯ ಒಳಗಾಗಿ ಅಥವಾ ಅದರ ಪೂರ್ವದಲ್ಲಿ ಹಾಕತಕ್ಕದ್ದು.

13. ಸ್ವೀಕೃತವಾದ ಬೇಡಿಕೆ/ ಟೆಂಡರನ್ನು ಯಾವುದೇ ಕಾರಣವನ್ನು ನೀಡದೆ ಸವಾಲು ಮಾಡುವ ಅಧಿಕಾರಿಗಳು ತಿರಸ್ಕರಿಸಬಹುದಾಗಿದೆ.
14. ಪ್ರತಿ ವಾಹನಗಳಿಗೆ ನಿಗದಿಪಡಿಸಿದ ಇಎಂಡಿ ಮೊತ್ತವನ್ನು ಪಾವತಿಸಿದ ಖರೀದಿದಾರರಿಗೆ ಮಾತ್ರ ಸವಾಲು/ ಟೆಂಡರಿನಲ್ಲಿ ಭಾಗವಹಿಸಲು ಅನುಮತಿಸಲಾಗುವುದು.
15. ಟೆಂಡರ್ ಫಾರ್ಮಿನಲ್ಲಿ ಖರೀದಿದಾರರು ತಮ್ಮ ಪೂರ್ಣ ವಿಳಾಸ, ವಯಸ್ಸು ಹಾಗೂ ಸಹಿ ಮಾಡತಕ್ಕದ್ದು ಹಾಗೂ ತಮ್ಮ ಹೆಚ್ಚಿನ ದರವನ್ನು ಅಂಕಿ ಹಾಗೂ ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಲು ಸೂಚಿಸಿದೆ.
16. ಟೆಂಡರ್/ಸವಾಲಿನ ಕುರಿತಾಗಿ ಯಾವುದೇ ತಕರಾರುಗಳು ಉದ್ಭವಿಸಿದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲ್ಲಾಪುರ ವಿಭಾಗ, ಯಲ್ಲಾಪುರ ರವರ ನಿರ್ಧಾರವೇ ಅಂತಿಮ ಎಂದು ಪರಿಗಣಿಸಲಾಗುವುದು.
17. ಟೆಂಡರ್/ ಸವಾಲಿನಲ್ಲಿ ಭಾಗವಹಿಸಲು ಮಾನಸಿಕ ಸ್ವಸ್ಥತೆವುಳ್ಳವರು ಹಾಗೂ 18 ವರ್ಷಕ್ಕೆ ಮೇಲ್ಪಟ್ಟವರಿಗೆ ಮಾತ್ರ ಅನುಮತಿಸಲಾಗುವುದು.
18. ಖರೀದಿದಾರರು ಯಾವುದೇ ಅಪರಾಧಗಳಲ್ಲಿ ಒಳಗಾಗಿ ಶಿಕ್ಷೆ ಅನುಭವಿಸಿದವರೆಂದು ಅಥವಾ ನ್ಯಾಯಾಲಯದ ನಿಂದನೆಗೆ ಒಳಪಟ್ಟವರು ಎಂದು ತಿಳಿದು ಬಂದಲ್ಲಿ ಅಂತಹವರ ಟೆಂಡರ್/ ಹರಾಜನ್ನು ರದ್ದುಪಡಿಸಲಾಗುವುದು.
19. ವಾಹನಗಳ ವಿಲೇವಾರಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಅವಶ್ಯವೆನಿಸಿದರೆ ಹೊಸದಾಗಿ ಯಾವುದೇ ಷರತ್ತನ್ನು ಸೇರಿಸಬಹುದು ಅಥವಾ ಪರಿಷ್ಕರಿಸಬಹುದು.
20. ಬಿಡ್ಡುದಾರರು ಮೂರು ಮತ್ತು ನಾಲ್ಕು ಚಕ್ರದ ಪ್ರತಿಯೊಂದು ವಾಹನದ ಬಿಡ್ಡಿಗೆ ರೂ. 10,000/– ಹಾಗೂ ದ್ವಿಚಕ್ರ ವಾಹನಗಳಿಗೆ ತಲಾ ರೂ. 5000/– ಗಳ ಮುಂಗಡ ಠೇವಣಿಯನ್ನು ಪ್ರತ್ಯೇಕವಾಗಿ ಹರಾಜು ಪ್ರಾರಂಭವಾಗುವ ಮುನ್ನ ಪಾವತಿಸಿ ರಶೀದಿಯನ್ನು ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು.
21. ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಚುನಾವಣಾ ಅಧಿಕಾರಿಗಳು ನೀಡಿದಂತೆ ಗುರುತಿನ ಚೀಟಿ, ಪಡಿತರ ಚೀಟಿ ಇಲ್ಲವೇ ಡ್ರೈವಿಂಗ್ ಲೈಸೆನ್ಸ್ ಇತ್ಯಾದಿಗಳ ಪ್ರತಿಯನ್ನು ಒಪ್ಪಿಸಿ ಭಾಗವಹಿಸತಕ್ಕದ್ದು.
22. ಟೆಂಡರ್ ಕಂ ಹರಾಜಿನಲ್ಲಿ ಜಯಶೀಲರಾದ ವ್ಯಕ್ತಿಗಳು ವಾಹನ ಖರೀದಿಸಿದ ಮೊತ್ತದ ಶೇ.50 ರಷ್ಟು ಹಣ ಮತ್ತು ಚಾಲ್ತಿ ದರ ತೆರಿಗೆಯನ್ನು ಹರಾಜು ಮುಗಿದ ಕೂಡಲೇ ಪಾವತಿ ಮಾಡತಕ್ಕದ್ದು.
23. ಹರಾಜನ್ನು ಅಂಗೀಕರಿಸುವ ಮತ್ತು ತಿರಸ್ಕರಿಸುವ ಎಲ್ಲಾ ಅಧಿಕಾರವು ಈ ಕೆಳ ಸಹಿದಾರರಿಗೆ ಇದ್ದು ಎಲ್ಲಾ ವಿಚಾರಗಳಲ್ಲಿ ಅವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
24. ಮೇಲೆ ತಿಳಿಸಿದ ವಾಹನಗಳು ಕೇವಲ ಅಂದಾಜು ಆಗಿದ್ದು, ಮೇಲೆ ಹೆಸರಿಸಿದ ವಾಹನಗಳಲ್ಲಿ ಯಾವುದಾದರೂ ವಾಹನಗಳನ್ನು ಇಲಾಖಾ ಉಪಯೋಗಕ್ಕಾಗಿ ಹಂಚಿಕೆ ಮಾಡಿದ್ದಲ್ಲಿ ಅಥವಾ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಲ್ಲಿ ಅಥವಾ ಇನ್ನಾವುದೇ ಕಾರಣಕ್ಕಾಗಿ ವಾಹನಗಳನ್ನು ಟೆಂಡರ್ ಕಂ ಹರಾಜಿನಿಂದ ಕೈ ಬಿಡಲಾಗುವುದು.
25. ಟೆಂಡರ್ ಹಾಗೂ ಹರಾಜಿಗೆ ಪ್ರತ್ಯೇಕ ಇಎಂಡಿ ಕಟ್ಟತಕ್ಕದ್ದು. ಇಎಂಡಿ ಕಟ್ಟಿದ ವ್ಯಕ್ತಿಗಳಿಗೆ ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
26. ಹರಾಜಿನಲ್ಲಿ ಇಡಲಾದ ಈ ವಾಹನಗಳಿಗೆ ಹಿಂದಿನ ಆರ್.ಸಿ. ಮಾಲೀಕರು ಪಾವತಿಸಬೇಕಾದ ತೆರಿಗೆ ಬಾಕಿ ಇದ್ದಲ್ಲಿ ಈ ಕಛೇರಿ ಹೊಣೆಯಾಗುವುದಿಲ್ಲ. ಹಾಗೂ ಅದರ ಬಾಕಿಗಳನ್ನು ಖರೀದಿದಾರರೇ ಪಾವತಿಸಬೇಕಾಗುತ್ತದೆ.
27. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಅಶೋಕ ಬಿ. ಬಸರಕೋಡ

ಪಿ.ಆರ್. 570 ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲ್ಲಾಪುರ ವಿಭಾಗ, ಯಲ್ಲಾಪುರ

KARNATAKA URBAN WATER SUPPLY & DRAINAGE BOARD

No. 6, Jala Bhavan, B.T.M. Layout, 1st Stage, Bannerughatta Main Road, Bangalore – 560 029

NOTIFICATION

Smt **U.L. LALITHA** Working as TYPIST in the Office of the Managing Director, Karnataka Urban Water Supply and Drainage Board, Bangalore is permitted to change her Name to Smt. **LALITHA IYER**

Managing Director

K.U.W.S. & D. Board, Bangalore.

P.D. 111

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಲ್ಪಾವಧಿ ಟೆಂಡರು ಅಧಿಸೂಚನೆ ಸಂ. 03:2009–10, ದಿನಾಂಕ: 25ನೇ ಮೇ 2009

3ನೇ ಕರೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ಮೇಲ್ಕಂಡ ಅಲ್ಪಾವಧಿ ಅಧಿಸೂಚನೆಯಡಿ ಆಹ್ವಾನಿಸಲಾಗಿದ್ದ, ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ 2ನೇ ಕರೆಯನ್ನು ಆಹ್ವಾನಿಸಲಾಗಿದ್ದು, ಈ ಕೆಳಕಂಡ ಕಾಮಗಾರಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (viz http://eproc.karnataka.gov.in) ದಿ: 14.07.2009 ರಿಂದ ದಿ: 25.07.2009ರ ಸಂಜೆ 4.00 ಗಂಟೆ ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

(1) ಟಿ.ನರಸೀಪುರ ತಾಲ್ಲೂಕು ತಲಕಾಡು–ವಿಜಯಪುರ–ಹೊಳೆಸಾಲು ರಸ್ತೆಯ ಸ. 0.00 ರಿಂದ 17.15 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿ (ಬೆಳಕವಾಡಿ ವರೆಗೆ) ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರಿಗಿಟ್ಟ ಮೊತ್ತ ರೂ. 3110.00 ಲಕ್ಷ, ಇ.ಎಂ.ಡಿ. 31.10 ಲಕ್ಷ ಮೇಲಿನ ಕಾಮಗಾರಿಗಳ ಟೆಂಡರ್ ಫಾರಂ ಬೆಲೆ ರೂ. 7500 + ಶೇ. 10 ರಷ್ಟು ತೆರಿಗೆ (ಪ್ರತ್ಯೇಕ) ಮತ್ತು ಮೇಲಿನ ಎಲ್ಲಾ ಕಾಮಗಾರಿಗಳಿಗೆ 1ನೇ ದರ್ಜೆ ಗುತ್ತಿಗೆದಾರರು ಭಾಗವಹಿಸಬಹುದು. (2) ಟಿ.ನರಸೀಪುರ ತಾಲ್ಲೂಕು ಮಾದಾಪುರ–ತಲಕಾಡು–ಸರಗೂರು ಹ್ಯಾಂಡ್ ಪೋಸ್ಟ್ ರಸ್ತೆಯ ಸ. 4.70 ರಿಂದ 16.60 ಕಿ.ಮಿ. ವರೆಗೆ ಅಭಿವೃದ್ಧಿ ಕಾಮಗಾರಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರಿಗಿಟ್ಟ ಮೊತ್ತ ರೂ. 1917.00 ಲಕ್ಷ, ಇ.ಎಂ.ಡಿ. 19.17 ಲಕ್ಷ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ದಿನಾಂಕ: 25.07.2009ರಂದು ಸಂಜೆ 4.00 ಗಂಟೆಗೆ ಟೆಂಡರ್ ಸಲ್ಲಿಸಲು ಕಡೆಯ ದಿನವಾಗಿರುತ್ತದೆ. ಮತ್ತು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ಲಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,

ಲೋ. ಬಂ. ಮತ್ತು ಒ. ಜ. ಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು

PUBLIC WORKS, PORTS & INLAND WATER TRANSPORT DEPARTMENT

INVITATION FOR SHORT TERM TENDERS

No. EE/ PWD, Mysore Division, Mysore IFT No. 03/ 2009-10, Dt. 25th May 2009.

CALL - 3

1. The Executive Engineer, Public works, Ports & Inland Water Transport Department, Mysore Division invites tenders from eligible tenderers in **TWO COVER SYSTEM** for the road works detailed in the table through e-procurement portal of the Government of Karnataka **(viz http://eproc.karnataka.gov.in)** The tenderers are advised to note the minimum qualification criteria specified in clause-3 of the Instructions to Tenderers to qualify for award of the contract.

2. Tender documents may be downloaded from the e-procurement portal of the Government of Karnataka from **14.07.2009 to 25.07.2009**

3. Tenders must be accompanied by earnest money deposit specified for the work in the table below. Earnest money deposit will have to be in any one of the forms as per the instructions in the e-procurement portal and shall have to be valid for **45 days** beyond the validity of the tender.

4. Tenders must be submitted online through e-procurement portal on or before **16.00 hours** on **25.07.2009** and the opening of the tenders will be as per the e-procurement portal guidelines.

5. Other details and conditions can be seen in the tender documents.

TABLE

Sl. No.	Name of the Work	Form No.	Approximate value of work (Rs. in lakhs)	Earnest money deposit (Rs. in lakhs)	Cost of document (Rs.)	Period of completion including rainy season	Contractor eligibility
1	Impt, & Strengthening of Talakadu-Vijayapura-Holesalu road from ch. 0.00 to 17.15 Km in T.Narasipura Taluk (upto Belakavadi)	K/W-4	3110.00	31.10	7500.00	4 Months	Class-1
2	Impt, & Strengthening of Madapur-Talakadu-Sargur Hand post road from ch. 4.70 to 16.60 Km in T.Narasipura Taluk.	K/W-4	1917.00	19.17	7500.00	4 Months	Class-1

P.R. 586

Executive Engineer, P.W.P. & I.W.T. Department, Mysore Division, Mysore

ರಾಷ್ಟ್ರೀಯ ಹೆದ್ದಾರಿಗಳು ಲೋಕೋಪಯೋಗಿ ಇಲಾಖೆ

ಸಂಖ್ಯೆ:ಕಾಅ:ರಾಹೆವಿಬೆಂ:ಯಂ:ಹರಾಜು:2009–10

ಟೆಂಡರ್ ಹಾಗೂ ಬಹಿರಂಗ ಹರಾಜು ಪ್ರಕಟಣೆ ಸಂ:4:2009–10, ದಿನಾಂಕ: 26ನೇ ಜೂನ್ 2009

ಸಾರ್ವಜನಿಕರಿಂದ ಈ ಕೆಳಗಿನ ವಾಹನ : ಯಂತ್ರೋಪಕರಣಗಳನ್ನು ಎಲ್ಲಿದೆಯೋ ಹೇಗಿದೆಯೋ ಅದೇ ಸ್ಥಿತಿಯಲ್ಲಿ ಕೆಳಕಂಡ ಸ್ಥಳಗಳಲ್ಲಿ ವಿಲೇವಾರಿ ಮಾಡಲು ಮೊಹರು ಮಾಡಿದ ಟೆಂಡರ್‌ಗಳನ್ನು (ದ್ವಿಪ್ರತಿಗಳಲ್ಲಿ) ಸ್ವೀಕರಿಸಲಾಗುವುದು

ಕ್ರ. ಸಂ.	ಯಂತ್ರೋಪಕರಣಗಳ ವಿವರ ಹಾಗೂ ಯಂತ್ರಗಳು ಇರುವ ಸ್ಥಳ	ಪರಿಮಾಣ	ನಿಗದಿಪಡಿಸಿದ ಮೌಲ್ಯ	ಠೇವಣಿ ನಗದು ಅಥವಾ ಡಿಮಾಂಡ್ ಡ್ರಾಫ್ಟ್ ಮೊತ್ತ ರೂ.ಗಳಲ್ಲಿ (ನಗದು ಸ್ವೀಕರಿಸಲಾಗುವುದಿಲ್ಲ)	ಟೆಂಡರ್ ದಾಖಲಾತಿಗಳ ಬೆಲೆ (ಹಿಂದಿರುಗಿಸ ಲಾಗುವುದಿಲ್ಲ) ಡಿಮಾಂಡ್ ಡ್ರಾಫ್ಟ್ ರೂ.ಗಳಲ್ಲಿ (ನಗದು ಸ್ವೀಕರಿಸಲಾಗುವುದಿಲ್ಲ)	ಟೆಂಡರ್‌ಗಾಗಿ ಅರ್ಜಿ ಸೀಕರಿಸಲಾಗುವ ಕೊನೆಯ ದಿನಾಂಕ	ಖಾಲಿ ಟೆಂಡರ್ ದಾಖಲಾತಿಗಳನ್ನು ನೀಡುವ ಅಂತಿಮ ದಿನ	ಭರ್ತಿಮಾಡಿ ಮೊಹರ್ ಮಾಡಿರುವ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಬಹಿರಂಗ ಹರಾಜು ಮಾಡಲಾಗುವ ದಿನಾಂಕ
1	ಡಿಆರ್‌ಆರ್–ಜೆ–4350 ರಾಹೆ ಉಪವಿಭಾಗ, ಮೈಸೂರು ಪಿಡಬ್ಲ್ಯೂಡಿ ಡಿವಿಜನ್ ಯಾರ್ಡ್, ಮೈಸೂರು	ಒಂದು	ರಹಸ್ಯವಾಗಿ ಇಡಲಾಗಿದೆ	4000.00	500+12.50% VAT	6.08.2009 ರಂದು ಬೆಳಿಗ್ಗೆ 11.00 ಗಂಟೆಯವರೆಗೆ	6.08.2009 ರಂದು ಬೆಳಿಗ್ಗೆ 11.30 ಗಂಟೆಯವರೆಗೆ	6.08.2009 ರಂದು 12.00 ಗಂಟೆಯವರೆಗೆ	6.08.2009 ರಂದು ಪೂರ್ವಾಹ್ನ 12.30 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್ ರಾಹೆ ವಿಭಾಗ ಬೆಂಗಳೂರು ರವರ ಕಛೇರಿಯಲ್ಲಿ
2	ಟಿಪ್ಪರ್ ಎಂಇಡಿ–570 ರಾಹೆ ಉಪವಿಭಾಗ ಮೈಸೂರು ಪಿಡಬ್ಲ್ಯೂಡಿ ಡಿವಿಜನ್ ಯಾರ್ಡ್, ಮೈಸೂರು	ಒಂದು	ರಹಸ್ಯವಾಗಿ ಇಡಲಾಗಿದೆ	4000.00	500+12.50% VAT	6.08.2009 ರಂದು ಬೆಳಿಗ್ಗೆ 11.00 ಗಂಟೆಯವರೆಗೆ	6.08.2009 ರಂದು ಬೆಳಿಗ್ಗೆ 11.30 ಗಂಟೆಯವರೆಗೆ	6.08.2009 ರಂದು 12.00 ಗಂಟೆಯವರೆಗೆ	6.08.2009 ರಂದು ಪೂರ್ವಾಹ್ನ 12.30 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್ ರಾಹೆ ವಿಭಾಗ ಬೆಂಗಳೂರು ರವರ ಕಛೇರಿಯಲ್ಲಿ
3	ಡಿಆರ್‌ಆರ್ ಸ್ಕೋಡಾ ರಾಹೆ ಉಪವಿಭಾಗ, ಬೆಂಗಳೂರು, (ಲೋ.ಇ.) ಯಶವಂತಪುರ ಯಾಂತ್ರಿಕ ಸಂಸ್ಥೆ ಉಪವಿಭಾಗ ಯಾರ್ಡ್, ಬೆಂಗಳೂರು	ಒಂದು	ರಹಸ್ಯವಾಗಿ ಇಡಲಾಗಿದೆ	4000.00	500+12.50% VAT	6.08.2009 ರಂದು ಬೆಳಿಗ್ಗೆ 11.00 ಗಂಟೆಯವರೆಗೆ	6.08.2009 ರಂದು ಬೆಳಿಗ್ಗೆ 11.30 ಗಂಟೆಯವರೆಗೆ	6.08.2009 ರಂದು 12.00 ಗಂಟೆಯವರೆಗೆ	6.08.2009 ರಂದು ಪೂರ್ವಾಹ್ನ 12.30 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್ ರಾಹೆ ವಿಭಾಗ ಬೆಂಗಳೂರು ರವರ ಕಛೇರಿಯಲ್ಲಿ

ಕಾರ್ಯಪಾಲಕ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು.

ಷರತ್ತು ಮತ್ತು ನಿಬಂಧನೆಗಳು:

1. ಈ ಕಛೇರಿಯಿಂದ ನಿಗದಿಪಡಿಸಿದ ಟೆಂಡರ್ ನಮೂನೆಯನ್ನು ರೂ.500+12.50%(VAT) (ಹಿಂದಿರುಗಿಸಲಾಗುವುದಿಲ್ಲ) ಒಟ್ಟು ಮೊತ್ತ ರೂ.562.50 ಗಳನ್ನು ಡಿಡಿ ಮುಖಾಂತರ, ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು ಇವರ ಹೆಸರಿಗೆ ಸಂದಾಯ ಮಾಡಿ ನಿಗದಿತ ದಿನಾಂಕದಂದು ಪಡೆಯಬಹುದು. ಟೆಂಡರ್‌ಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ ಹಾಗೂ 'ನಗದು ಮೊತ್ತವನ್ನು' ಸ್ವೀಕರಿಸಲಾಗುವುದಿಲ್ಲ.
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ನಿಗದಿಪಡಿಸಿದ ಠೇವಣಿಯೊಂದಿಗೆ ಸಲ್ಲಿಸತಕ್ಕದ್ದು ಮತ್ತು ನಮೂದಿಸುವ ಬೆಲೆಯ ಶೇ.50 ರಷ್ಟನ್ನು ಹಾಗೂ ಶೇ.4 ಮಾರಾಟ ತೆರಿಗೆ ಸೇರಿ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು ಇವರ ಹೆಸರಿನಲ್ಲಿ ಡಿಡಿ ರೂಪದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಡಿಮ್ಯಾಂಡ್ ಡ್ರಾಫ್ಟ್‌ನ್ನು ಟೆಂಡರ್‌ನೊಂದಿಗೆ ಸಲ್ಲಿಸಲು ಸಾಧ್ಯವಾಗದೇ ಹೋದಲ್ಲಿ, ಟೆಂಡರ್‌ದಾರರು ಟೆಂಡರ್ ತೆರೆದಾಗ, ಅವರ ಟೆಂಡರ್ ಮೊತ್ತ ಗರಿಷ್ಠವಾಗಿದ್ದಲ್ಲಿ, ಸದರಿ ಮೊತ್ತವನ್ನು ಡಿ.ಡಿ.ರೂಪದಲ್ಲಿ ಸಂದಾಯ ಮಾಡಲು ಹಾಜರಿರತಕ್ಕದ್ದು. ಈ ಮೇಲಿನ ಎರಡೂ ನಿಬಂಧನೆಗಳನ್ನು ಪಾಲಿಸದೇ ಇದ್ದ ಪಕ್ಷದಲ್ಲಿ, ಅವರ ಟೆಂಡರ್ ಮೊತ್ತವು ಅತೀ ಹೆಚ್ಚಿನದಾಗಿದ್ದರೂ ಸಹಾ ತಿರಸ್ಕರಿಸಲಾಗುವುದು. ಮೊಹರು ಮಾಡಿದ ಟೆಂಡರ್‌ಗಳನ್ನು ಈ ಕಛೇರಿಯಲ್ಲಿ ದಿ:06.08.2009ರಂದು ಅಪರಾಹ್ನ 12.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಮೊಹರು ಮಾಡಿದ ಲಕೋಟೆಯ ಮೇಲೆ ತಪ್ಪದೇ "ಸಂಬಂಧಿಸಿದ ವಾಹನದ ಹೆಸರು ಹಾಗೂ ವಾಹನ ಸಂಖ್ಯೆ ಬರೆದು ಅದರ ವಿಲೇವಾರಿಗಾಗಿ ಟೆಂಡರ್" ಎಂದು ನಮೂದಿಸತಕ್ಕದ್ದು. ಮೊಹರು ಮಾಡಿದ ಟೆಂಡರ್‌ಗಳನ್ನು ದಿ:06.08.2009 ರಂದು ಮಧ್ಯಾಹ್ನ 12.30 ಗಂಟೆಗೆ ಈ ಕಛೇರಿಯಲ್ಲಿ ನಡೆಸುವ ಬಹಿರಂಗ ಹರಾಜಿನ ನಂತರ ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯಲಾಗುವುದು. ಒಂದು ವೇಳೆ ಆ ದಿನ ಹರಾಜು ನಡೆಸಲು ಸಾಧ್ಯವಾಗದಿದ್ದಲ್ಲಿ ಮುಂದಿನ ಸೂಕ್ತ ದಿನಾಂಕವನ್ನು ತಿಳಿಸಲಾಗುವುದು.
3. ಮೇಲೆ ತಿಳಿಸಿರುವ ದಿನಾಂಕಗಳಲ್ಲಿ ಯಾವುದಾದರೂ ಸಾರ್ವಜನಿಕ ರಜೆ ಆಗಿದ್ದಲ್ಲಿ ಮುಂದಿನ ಕೆಲಸದ ದಿನವು ಅನ್ವಯವಾಗುತ್ತದೆ.
4. ಟೆಂಡರ್‌ನ್ನು ಅಂತಿಮವಾಗಿ ಒಪ್ಪುವ ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.
5. ಬಹಿರಂಗ ಹರಾಜು ದಿ: 06.08.2009 ರಂದು ಮಧ್ಯಾಹ್ನ 12.30 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು, ಇವರ ಕಛೇರಿಯಲ್ಲಿ ನಡೆಯಲಿದ್ದು ಮೊಹರು ಮಾಡಿದ ಟೆಂಡರ್ ಸಲ್ಲಿಸಿರುವ ಟೆಂಡರ್‌ದಾರರೊಂದಿಗೆ ಬೇರೆ ಯಾರಾದರೂ ನಿಗದಿತ ಠೇವಣಿಯನ್ನು ಪ್ರತಿಯೊಂದು ವಾಹನ / ಯಂತ್ರಕ್ಕೆ ಬೇರೆ ಬೇರೆಯಾಗಿ ಹರಾಜಿನ ಮೊಬಲಗಿನ ಡಿಡಿ ಯನ್ನು ಸಂದಾಯ ಮಾಡಿ ಹರಾಜಿನಲ್ಲಿ ಭಾಗವಹಿಸಬಹುದು.
6. ಯಶಸ್ವಿ ಬಿಡ್ಡುದಾರರು ಸ್ಥಳದಲ್ಲಿಯೇ ಪ್ರತಿಯೊಂದು ವಾಹನ/ಯಂತ್ರಕ್ಕೆ ಬಿಡ್ಡಿನ ಶೇ.50 ರಷ್ಟನ್ನು+ 4% ಮಾರಾಟ ತೆರಿಗೆ ಮೊತ್ತವನ್ನು ಪಾವತಿಸತಕ್ಕದ್ದು.
7. ಸಕ್ಷಮ ಪ್ರಾಧಿಕಾರದಿಂದ ಬಹಿರಂಗ ಹರಾಜಿನಲ್ಲಿಯ ಹಾಗೂ ಟೆಂಡರ್‌ದಾರರಲ್ಲಿನ ಅತೀ ಹೆಚ್ಚಿನ ಬಿಡ್ಡುದಾರರು ದರದ ಮಂಜೂರಾತಿಯನ್ನು ಪಡೆದ ನಂತರ, ಯಶಸ್ವಿ ಬಿಡ್ಡುದಾರರು, ಬಾಕಿ ಉಳಿದ ಮೊತ್ತವನ್ನು ತೆರಿಗೆಸಹಿತ ಸಂದಾಯ ಮಾಡಿ ಸಂಬಂಧಿಸಿದ ವಾಹನ/ ಯಂತ್ರವನ್ನು ವಿಳಂಬ ಮಾಡದೇ 15 ದಿನಗಳ ಅವಧಿಯಲ್ಲಿ ಒಯ್ಯತಕ್ಕದ್ದು. ತಪ್ಪಿದಲ್ಲಿ, ಸದರಿ ವಾಹನ ಯಂತ್ರಗಳ ಮೇಲೆ ದಂಡವನ್ನು ವಿಧಿಸಲಾಗುವುದು, ಇದಕ್ಕೂ ತಪ್ಪಿದಲ್ಲಿ (ಮಂಜೂರಾತಿಯಾದ ಒಂದು ತಿಂಗಳ ನಂತರ) ಸದರಿ ಮೊಬಲಗನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ವಾಹನಗಳನ್ನು ನಿಮ್ಮ ವಶಕ್ಕೆ ನೀಡಲಾಗುವುದಿಲ್ಲ.
8. ಆಸಕ್ತಿಯುಳ್ಳ ಸಾರ್ವಜನಿಕರು ಹರಾಜಿಗೆ ಸಂಬಂಧಿಸಿದ ವಾಹನಗಳನ್ನು ಕಛೇರಿಯ ವೇಳೆಯಲ್ಲಿ ಸಂಬಂಧಿಸಿದ ಟೆಂಡರ್ ಕಾಲಂ ಕ್ರಸಂ.2 ರಲ್ಲಿ ನಮೂದಿಸಿರುವ ಸ್ಥಳದಲ್ಲಿ ವೀಕ್ಷಿಸಬಹುದು. ಈ ಯಂತ್ರಗಳ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪವಿಭಾಗ, ಬೆಂಗಳೂರು ಮೈಸೂರು ಇವರನ್ನು ಸಂಪರ್ಕಿಸಬಹುದು.

ಪಿ.ಆರ್. 546

ಕಾರ್ಯನಿರ್ವಾಹಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜುಲೈ ೨೩, ೨೦೦೯ (ಶ್ರಾವಣ ೧, ಶಕ ವರ್ಷ ೧೯೩೧)	ಸಂಚಿಕೆ ೩೦

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ನಂ: ಎಲ್.ಆರ್.ಎಫ್ (109) (ಎ) ಸಿಆರ್ 4/09-10, ಬೆಂಗಳೂರು, ದಿನಾಂಕ: 16ನೇ ಜೂನ್ 2009

ವಿಷಯ: ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ ಗ್ರಾಮದ ಹಾರೋಹಳ್ಳಿ ಸ.ನಂ; 87 ರಲ್ಲಿ 1-15 ಎಕರೆ ಮತ್ತು ಸ.ನಂ: 88 ರಲ್ಲಿ 0-28 ಗುಂಟೆ ಒಟ್ಟು 2-03 ಎಕರೆ (ಎರಡು ಎಕರೆ ಮೂರು ಗುಂಟೆ) ಜಮೀನನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಅನುಮತಿ ಕೋರಿರುವ ಬಗ್ಗೆ.

ಉಲ್ಲೇಖ: 1. ಇಷ್ ಕೃಪಾ ಟ್ರಸ್ಟ್, ಎಸ್.ಎಫ್.ಎಸ್. ಎನ್‌ಕ್ಲೈವ್-54, 11ನೇ ಕ್ರಾಸ್, ಶ್ರೀ ಅನಂತನಗರ, ಎಲೆಕ್ಟ್ರಾನಿಕ್ ಸಿಟಿ, ಆನೇಕಲ್ ರವರ ಮನವಿ ದಿನಾಂಕ: 29.05.2009.

2. ತಹಶೀಲ್ದಾರ್ ಆನೇಕಲ್ ತಾಲ್ಲೂಕು ರವರ ಪತ್ರದ ನಂ:ಎಲ್‌ಆರ್‌ಎಫ್ (ಅ) ಸಿಆರ್ 4/2009-10 ದಿನಾಂಕ: 29.05.2009.

ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ ಗ್ರಾಮದ ಹಾರೋಹಳ್ಳಿ ಸ.ನಂ; 87 ರಲ್ಲಿ 1-15 ಎಕರೆ ಮತ್ತು ಸ.ನಂ: 88 ರಲ್ಲಿ 0-28 ಗುಂಟೆ ಒಟ್ಟು 2-03 ಎಕರೆ (ಎರಡು ಎಕರೆ ಮೂರು ಗುಂಟೆ) ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಬೇಡಿಕೆ ಹಾಗೂ ನಮೂನೆ-15ಎ ಮತ್ತು ನಮೂನೆ-15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ತಹಸೀಲ್ದಾರ್, ಆನೇಕಲ್ ತಾಲ್ಲೂಕು ರವರ ಪತ್ರದ ನಂ: ಎಲ್‌ಆರ್‌ಎಫ್ (ಅ) ಸಿಆರ್ 4/2009-10 ದಿನಾಂಕ: 29.05.2009 ರಲ್ಲಿ ಪ್ರಸ್ತಾವಿತ ಗ್ರಾಮದ ಮೇಲ್ಕಂಡ ಸ.ನಂ; 87 ರಲ್ಲಿ 1-15 ಎಕರೆ ಮತ್ತು ಸ.ನಂ: 88 ರಲ್ಲಿ 0-28 ಗುಂಟೆ ಒಟ್ಟು 2-03 ಎಕರೆ (ಎರಡು ಎಕರೆ ಮೂರು ಗುಂಟೆ) ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109(1)(11) ರಡಿ ವಿನಾಯ್ತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸಂಸ್ಥೆಯು ನೋಂದಣಿ ಸಂಖ್ಯೆ: 145/07-08 ದಿನಾಂಕ: 12.11.2007 ರಂದು ನೊಂದಾಯಿಸಲ್ಪಟ್ಟಿದೆ. ಖಾತೆದಾರರಿಂದ ಸದರಿ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಪ್ರಸ್ತಾವಿತ ಜಮೀನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109 ರ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕೆ 2 ಯೂನಿಟ್‌ಗಳವರೆಗೆ ಜಮೀನು ಹೊಂದಲು ಅವಕಾಶ ಕಲ್ಪಿಸಿದೆ. ಈ ಪ್ರಸ್ತಾವನೆ ಕರ್ನಾಟಕ ತಿದ್ದುಪಡಿ ಕಾಯ್ದೆ 1995ರ ಪ್ರಕಾರ ಕಲಂ 109 (1)(11) ಮತ್ತು ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಕಾಯಿದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ ಹಾರೋಹಳ್ಳಿ ಗ್ರಾಮದ ಸ.ನಂ; 87 ರಲ್ಲಿ 1-15 ಎಕರೆ ಮತ್ತು ಸ.ನಂ: 88 ರಲ್ಲಿ 0-28 ಗುಂಟೆ ಒಟ್ಟು 2-03 ಎಕರೆ (ಎರಡು ಎಕರೆ ಮೂರು ಗುಂಟೆ) ಜಮೀನನ್ನು ಇಷ್ ಕೃಪಾ ಟ್ರಸ್ಟ್, ಎಸ್.ಎಫ್.ಎಸ್. ಎನ್‌ಕ್ಲೈವ್-54, 11ನೇ ಕ್ರಾಸ್, ಶ್ರೀ ಅನಂತನಗರ, ಎಲೆಕ್ಟ್ರಾನಿಕ್ ಸಿಟಿ, ಆನೇಕಲ್‌ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 (1)(11) ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ವ್ಯಶಾಇ 47 ಶಾಸನ 2001 ಬೆಂಗಳೂರು, ದಿನಾಂಕ: 23.04.2003 ರಂತೆ ಶೈಕ್ಷಣಿಕ ಉದ್ದೇಶಕ್ಕೆ 2 ಯುನಿಟ್‌ಗಳಷ್ಟು ಜಮೀನನ್ನು ಹೊಂದಲು ಅವಕಾಶ ಕಲ್ಪಿಸಿದ್ದು, ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಈ ಬಗ್ಗೆ ತಹಸೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1995 ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 55 ಪೆಯಿಡ್ ಅಪ್ ಷೇರು ಬಂಡವಾಳ ಹೊಂದಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಬೇರೆ ರೀತ್ಯಾ ವರ್ಗಾಯಿಸಬಾರದು.
3. ಸದರಿ ಜಮೀನು ಸಿ.ಡಿ.ಪಿ ಪ್ರಕಾರ ಹಸಿರು ವಲಯದಲ್ಲಿ ಬರುತ್ತಿದ್ದು, ವಿದ್ಯಾ ಸಂಸ್ಥೆಗೆ ಉಪಯೋಗಿಸಿಕೊಳ್ಳಲು ಭೂ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಭೂ ಬದಲಾವಣೆ ಮಾಡಿಕೊಳ್ಳತಕ್ಕದ್ದು.
